# ಜನತಾವಾಣಿ


ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಬುಧವಾರ, ಫೆಬ್ರವರಿ 08, 2023

ಸಂಪುಟ : 49 ಸಂಚಿಕೆ : 267 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com





## ಪವರ್ ಗ್ರಿಡ್ ಕಾರ್ಪೊರೇಷನ್‌ನಿಂದ ಜಿಲ್ಲಾಸ್ಪತ್ರೆಗೆ 3.87 ಕೋಟಿ ರೂ. ಬಿಡುಗಡೆ



ದಾವಣಗೆರೆ, ಫೆ.7- ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾದಿಂದ ಚಿಗಟೇರಿ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗೆ ವಿವಿಧ ಸಾಮಗ್ರಿಗಳ ಖರೀದಿಗಾಗಿ 3.87 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ನಿರ್ದೇಶಕ ಕೆ. ಎನ್. ಓಂಕಾರಪ್ಪ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇ ಮೊದಲ ಬಾರಿಗೆ ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾಗೆ ಕರ್ನಾಟಕದಿಂದ ನಾನು ಆಯ್ಕೆಯಾಗಿದ್ದು, ಈ ಭಾಗದ ಮೂಲ ಸೌಲಭ್ಯಗಳಿಗೆ ಅನುದಾನ ಬಿಡುಗಡೆ ಮಾಡಲು ಒತ್ತು ನೀಡಿರುವುದಾಗಿ ಹೇಳಿದರು.

ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸುವಂತೆ ಶಿಕ್ಷಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹೇಳಿದ್ದು, ಈ ಇಲಾಖೆಗಳು ನಿರ್ಲಕ್ಷ್ಯ ವಹಿಸುತ್ತಿವೆ ಎಂದು ಓಂಕಾರಪ್ಪ ದೂರಿದರು.

ಪತ್ರಿಕಾಗೋಷ್ಠಿಯಲ್ಲಿ ಹೆಚ್.ಎಸ್. ಲಿಂಗರಾಜ್, ಗಣೇಶ್ ಕರೂರು, ಡಿ. ಎಸ್. ಜಯಣ್ಣ, ಕೆ.ಪದ್ಮನಾಭ ಶೆಟ್ಟಿ, ಆರ್.ಪ್ರಕಾಶ್, ಅಜ್ಜಯ್ಯ, ಚಂದ್ರಪ್ಪ, ಕಿಶೋರ್ ಕುಮಾರ್ ಉಪಸ್ಥಿತರಿದ್ದರು.

# ಮಕ್ಕಳಲ್ಲಿ ದೇಶಭಕ್ತಿ, ರಾಷ್ಟ್ರಪ್ರೇಮ ಬೆಳೆಸಲು ಕರೆ



ಮಲೇಬೆನ್ನೂರು, ಫೆ.7- ಇತ್ತೀಚೆಗೆ ಹರಿಹರ ತಾಲ್ಲೂಕಿನ ಸೇವಾದಳ ಶಿಕ್ಷಕ, ಶಿಕ್ಷಕಿಯರ ಒಂದು ದಿನದ ಪುನಶ್ಚೇತನ ಕಾರ್ಯಾಗಾರವನ್ನು ಮಲೇಬೆನ್ನೂರು ಸಮೀಪದ ಶ್ರೀ ಭದ್ರಕಾಳಿ ವೀರಭದ್ರೇಶ್ವರ ಸ್ವಾಮಿ ದೇವಾಲಯದಲ್ಲಿ ನೆರವೇರಿಸಿದರು.

ಅಧ್ಯಕ್ಷತೆಯನ್ನು ಎಂ. ಚಿದಾನಂದಪ್ಪ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಹರಿಹರ ಕ್ಷೇತ್ರದ ಶಾಸಕ ಎಸ್. ರಾಮಪ್ಪ, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ಶಾಸಕರು ಉದ್ಘಾಟಿಸಿ ಮಾತನಾಡುತ್ತಾ, ಬಂದಿರುವ ಎಲ್ಲಾ ಶಿಕ್ಷಕರುಗಳು, ಮಕ್ಕಳಲ್ಲಿ ದೇಶಭಕ್ತಿ, ರಾಷ್ಟ್ರಪ್ರೇಮ ಬೆಳೆಸುವಲ್ಲಿ ಶ್ರಮಿಸಬೇಕೆಂದು ಕರೆ ನೀಡಿದರು. ತಾಲ್ಲೂಕಿನ 100 ಕ್ಕೂ ಹೆಚ್ಚು ಶಿಕ್ಷಕರು ಭಾಗವಹಿಸಿದ್ದರು.

ಭಾರತ ಸೇವಾದಳದ ಸಂಘಟಕರಾದ ಅಣ್ಣಯ್ಯ ಪ್ರಾಸ್ತಾವಿಕವಾಗಿ ಮಾತನಾಡಿ, ಭಾರತ ಸೇವಾದಳ ನಡೆದು ಬಂದ ದಾರಿ ವಿವರಿಸಿದರು. ಸಂಪನ್ಮೂಲ ಶಿಕ್ಷಕರಾದ ಕೆ.ಟಿ. ಜಯ್ಯಪ್ಪ ಪ್ರತಿಜ್ಞಾ ವಿಧಿ ಬೋಧಿಸಿದರು. ಟಿ.ಎಸ್. ಕುಮಾರಸ್ವಾಮಿ ರಾಷ್ಟ್ರಧ್ವಜ, ರಾಷ್ಟ್ರಗೀತೆ, ಭಾವೈಕ್ಯತೆಯ ಬಗ್ಗೆ

### ಮಲೇಬೆನ್ನೂರಿನಲ್ಲಿ ಭಾರತ ಸೇವಾದಳ ಶಿಕ್ಷಕರುಗಳ ಮಿಲಾಪ್ ಶಿಬಿರ

ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ಭಾರತ ಸೇವಾದಳ ತಾಲ್ಲೂಕು ಘಟಕದ ಪದಗ್ರಹಣ ಕಾರ್ಯಕ್ರಮ ನಡೆಯಿತು. ತಾಲ್ಲೂಕು ಸಮಿತಿ ಗೌರವಾಧ್ಯಕ್ಷರಾದ ಎಸ್. ರಾಮಪ್ಪ, ಸದಸ್ಯರಾದ ಎಂ. ನಾಗೇಂದ್ರಪ್ಪ, ಗೋವಿಂದಪ್ಪ ಸಾವಜ್ಜಿ, ಮಹಾಂತಯ್ಯ ಚೊಗಚಿಕೊಪ್ಪ, ವೀರೇಶ್ ಹನಗವಾಡಿ ಇವರನ್ನು ಸನ್ಮಾನಿಸಲಾಯಿತು.

ತಾಲ್ಲೂಕು ಘಟಕದ ಕಾರ್ಯದರ್ಶಿ ಆರ್. ಆರ್. ಮಠ ಸರ್ವರನ್ನೂ ಸ್ವಾಗತಿಸಿದರು. ಜಿಲ್ಲಾ ಸಮಿತಿ ಸದಸ್ಯರಾದ ಸಿದ್ದಲಿಂಗಪ್ಪ ಎ. ಸರ್ವರಿಗೂ ವಂದಿಸಿದರು. ದೈಹಿಕ ಶಿಕ್ಷಕರಾದ ಹಾಲಪ್ಪ ನಿರೂಪಿಸಿದರು.

## ಅದಾನಿ ಷೇರುಗಳ ಚೇತರಿಕೆ, ರೇಟಿಂಗ್ ಸಂಸ್ಥೆಗಳ ಬಲ

ನವದೆಹಲಿ, ಫೆ. 7 – ಮಂಗಳವಾರದಂದು ಅದಾನಿ ಸಮೂಹದ ಷೇರುಗಳು ಮಾರುಕಟ್ಟೆಯಲ್ಲಿ ಚೇತರಿಕೆ ಕಂಡಿವೆ. ಅದಾನಿ ಸಮೂಹದಲ್ಲಿ ಹೂಡಿಕೆ ಮಾಡಿರುವ ಬ್ಯಾಂಕುಗಳಿಗೆ ಅಪಾಯದ ಸಾಧ್ಯತೆ ಇಲ್ಲ ಎಂದು ಅಂತರರಾಷ್ಟ್ರೀಯ ರೇಟಿಂಗ್ ಸಂಸ್ಥೆಗಳು ತಿಳಿಸಿವೆ.

ಹಿಂಡನ್‌ಬರ್ಗ್ ರೀಸರ್ಚ್ ಸಂಸ್ಥೆಯ ವರದಿ ಜನವರಿ 24ರಂದು ಪ್ರಕಟವಾದ ನಂತರ ಕಂಪನಿಯ ಷೇರುಗಳ ಮೌಲ್ಯ 110 ಶತಕೋಟಿ ಡಾಲರ್ ಕುಸಿತ ಕಂಡಿದೆ.

ಆದರೆ, ಮಂಗಳವಾರದಂದು ಪರಿಸ್ಥಿತಿ ತುಸು ಬದಲಾಗಿದೆ. ಅದಾನಿ ಎಂಟರ್‌ಪ್ರೈಸಸ್ ಷೇರು ಮೌಲ್ಯ ಶೇ.15ರ ಏರಿಕೆ ಕಂಡಿದೆ. ಅದಾನಿ ವಿಲ್ಮರ್ ಶೇ.5ರ ಏರಿಕೆಯಾಗಿದೆ.

ಅದಾನಿ ಪೋರ್ಟ್ಸ್ ಮತ್ತು ಎಸ್‌ಇಝಡ್, ಅಂಬುಜಾ ಸಿಮೆಂಟ್ಸ್, ಎ.ಸಿ.ಸಿ. ಹಾಗೂ ಎನ್.ಡಿ.ಟಿ.ವಿ.ಗಳು ಶೇ.1ರ ಏರಿಕೆಯಾಗಿವೆ. ಆದರೆ, ಅದಾನಿ ಪವರ್, ಅದಾನಿ ಗ್ರೀನ್ ಎನರ್ಜಿ ಹಾಗೂ ಅದಾನಿ ಟೋಟಲ್ ಗ್ಯಾಸ್ ಸಂಸ್ಥೆಗಳು ಕುಸಿತ ಕಂಡಿವೆ.

# ನಗರದಲ್ಲಿ ವಿಶ್ವ ಕನ್ನಡ ಸಮ್ಮೇಳನ : ವಾಮದೇವಪ್ಪ ಹರ್ಷ



ದಾವಣಗೆರೆ, ಫೆ.7- ಈ ವರ್ಷವೇ ದಾವಣಗೆರೆಯಲ್ಲಿ ವಿಶ್ವ ಕನ್ನಡ ಸಮ್ಮೇಳನ ನಡೆಸುವುದಾಗಿ ಮುಖ್ಯಮಂತ್ರಿಗಳು ಘೋಷಣೆ ಮಾಡಿರುವುದಕ್ಕೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ ಹರ್ಷ ವ್ಯಕ್ತಪಡಿಸಿದ್ದಾರೆ.

ನಿನ್ನೆ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಜಗತ್ತಿನ ಮೂಲೆ ಮೂಲೆಗಳಲ್ಲಿ ನಲೆಸಿರುವ ಕನ್ನಡಿಗರನ್ನು ಒಟ್ಟುಗೂಡಿಸಿ, ಕನ್ನಡ ನಾಡು, ನುಡಿಗೆ ಸಂಬಂಧಿಸಿದಂತೆ ಚರ್ಚಿಸಲು ನಗರದಲ್ಲಿ ವಿಶ್ವ ಕನ್ನಡ ಸಮ್ಮೇಳನ ನಡೆಸುವುದಾಗಿ ಘೋಷಣೆ ಮಾಡಿರುವುದನ್ನು ವಾಮದೇವಪ್ಪ ಅವರು ಸ್ವಾಗತಿಸಿದ್ದಾರೆ.

3ನೇ ವಿಶ್ವ ಕನ್ನಡ ಸಮ್ಮೇಳನವನ್ನು ಆಯೋಜಿಸಲು ದಾವಣಗೆರೆ ಜಿಲ್ಲೆ ತುದಿಗಾಲಿನಲ್ಲಿ ನಿಂತಿದೆ. ಈಗಾಗಲೇ ವಿಶ್ವ ಕನ್ನಡ ಸಮ್ಮೇಳನದ ಕುರಿತಾಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಸುಮಾರು 1500 ಪುಟಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಲ್ಲಿಸಿಯಾಗಿದೆ. 4-5 ವರ್ಷಗಳ ಹಿಂದೆಯೇ ಈ ಸಮ್ಮೇಳನ ದಾವಣಗೆರೆಯಲ್ಲಿ ನಡೆಯಬೇಕಿತ್ತು. ಆದರೆ ಅನಿವಾರ್ಯ ಕಾರಣಗಳಿಂದಾಗಿ ಅದು ಮುಂದೂಡಲ್ಪಟ್ಟಿತ್ತು. ನಂತರ 2021 ನವೆಂಬರ್ ನಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಚುನಾಯಿತರಾದ ಬಳಿಕ ವಿಶ್ವಕನ್ನಡ ಸಮ್ಮೇಳನವನ್ನು ದಾವಣಗೆರೆಯಲ್ಲಿಯೇ ನಡೆಸಬೇಕೆಂದು ಪಣತೊಟ್ಟು ಶಾಸಕರು, ಸಚಿವರು, ಮುಖ್ಯಮಂತ್ರಿಗಳಾದಿಯಾಗಿ ಎಲ್ಲರ ಬಳಿಯೂ ಒತ್ತಡ ಹೇರಿದ್ದರು. ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿಯೂ ತಾವು ಗೆದ್ದರೆ ವಿಶ್ವಕನ್ನಡ ಸಮ್ಮೇಳನವನ್ನು ದಾವಣಗೆರೆಯಲ್ಲಿ ನಡೆಸಲು ಪ್ರಯತ್ನಿಸುವುದಾಗಿ ಘೋಷಿಸಿದ್ದರು. ಕಳೆದ ವರ್ಷ ಎಲೆಬೇತೂರಿನಲ್ಲಿ ನಡೆದ 11 ನೇ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲೂ ವಿಶ್ವ ಕನ್ನಡ ಸಮ್ಮೇಳನವನ್ನು ದಾವಣಗೆರೆಯಲ್ಲಿ ಆಯೋಜಿಸಬೇಕು ಎನ್ನುವ ನಿರ್ಣಯವನ್ನು ಕೈಗೊಂಡು ಸರ್ಕಾರಕ್ಕೆ ಮನವಿ ಮಾಡಲಾಗಿತ್ತು. ಇತ್ತೀಚೆಗೆ ಈ ಬಾರಿಯ ಬಜೆಟ್‌ನಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ದಾವಣಗೆರೆಯಲ್ಲಿ ಆಯೋಜಿಸುವ ಬಗ್ಗೆ ಪ್ರಸ್ತಾಪಿಸಬೇಕು ಹಾಗೂ ಅನುದಾನವನ್ನು ಮೀಸಲಿರಿಸಬೇಕು ಎಂದು ಮುಖ್ಯಮಂತ್ರಿಗಳಿಗೆ ಪತ್ರವನ್ನೂ ಬರೆದು ಆಗ್ರಹಿಸಿದ್ದರು.

ಕಳೆದ ತಿಂಗಳು ಜನವರಿಯಲ್ಲಿ ಹಾವೇರಿಯಲ್ಲಿ ನಡೆದ 86 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲೂ ದಾವಣಗೆರೆಯಲ್ಲಿಯೇ ವಿಶ್ವ ಕನ್ನಡ ಸಮ್ಮೇಳನ ನಡೆಯಬೇಕೆಂದು ನಿರ್ಣಯ ಮಂಡಿಸಿ ಸರ್ಕಾರಕ್ಕೆ ಒತ್ತಡ ಹೇರಿದ್ದರು.

## ಹರಿಹರ : ನೂತನ ತಹಶೀಲ್ದಾರ್ ಪೃಥ್ವಿ ಅಧಿಕಾರ



ಹರಿಹರ, ಫೆ. 7- ತಾಲ್ಲೂಕಿನ ನೂತನ ತಹಶೀಲ್ದಾರ್ ಆಗಿ ಪೃಥ್ವಿ ಅಧಿಕಾರ ವಹಿಸಿಕೊಂಡಿದ್ದಾರೆ. ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಎಂ.ಬಿ. ಅಶ್ವತ್ಥ್ ಅವರು ಅಧಿಕಾರ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಆರ್. ಐ. ಮಂಜುನಾಥ್, ರೇವಣಸಿದ್ದಪ್ಪ ಅಂಗಡಿ, ಗ್ರೇಡ್2 ತಹಶೀಲ್ದಾರ್ ಶಶಿಧರಯ್ಯ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎ.ಕೆ. ಭೂಮೇಶ್, ನಾಗೇಂದ್ರಪ್ಪ, ರೇವಣಸಿದ್ದಪ್ಪ ಅಂಗಡಿ, ಎಂ. ಉಮ್ಮಣ್ಣ, ಹೆಚ್.ಜಿ. ಹೇಮಂತ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ಹರಿಹರ : ವಿವಿಧ ಕೋರ್ಸ್‌ಗಳಿಗೆ ತರಬೇತಿ

ದಾವಣಗೆರೆ, ಫೆ.7- ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, ಹರಿಹರದಲ್ಲಿ ಸ್ವಾತಂತ್ರ್ಯ ಅಮೃತ್ ಮಹೋತ್ಸವದ ಮುನ್ನಡೆ ಯೋಜನೆಯಡಿ ಹಿಂದುಳಿದ ವರ್ಗದ ನಿರುದ್ಯೋಗಿ ಯುವಕ, ಯುವತಿಯರಿಗೆ ಉಚಿತವಾಗಿ ಅಲ್ಪಾವಧಿಯಲ್ಲಿ ವಿವಿಧ ಕೋರ್ಸುಗಳ ತರಬೇತಿ ನೀಡಲಾಗುತ್ತದೆ.

ಎಸ್ಸೆಸ್ಸೆಲ್ಸಿ, ಪಿ.ಯು.ಸಿ, ಐ.ಟಿ.ಐ, ಡಿಪ್ಲೋಮಾ, ಬಿ.ಇ ಮತ್ತು ಯಾವುದೇ ಪದವಿ ಉತ್ತೀರ್ಣರಾಗಿರಬೇಕು. ಇಂಡಸ್ಟ್ರೀಯಲ್ ಆಟೋಮೇಷನ್ ಟೆಕ್ನೀಷಿಯನ್, ಇಂಟರ್ನೆಟ್ ಆಫ್ ಥಿಂಗ್, 3ಡಿ ಪ್ರಿಂಟಿಂಗ್, ಸಿ.ಎನ್.ಸಿ. ಮಿಲ್ಲಿಂಗ್ ಮಷಿನ್ ಆಪರೇಟರ್, ಸಿ.ಎನ್.ಸಿ. ಪ್ರೋಗ್ರಾಮಿಂಗ್ ಮತ್ತು ಆಪರೇಷನ್ ಹಾಗೂ ಪ್ರೊಡಕ್ಷನ್ ಇಂಜಿನಿಯರ್ ಕೋರ್ಸ್‌ಗಳಿಗೆ ತರಬೇತಿ ನೀಡಲಾಗುತ್ತದೆ.

ಅರ್ಜಿ ಸಲ್ಲಿಸಲು ಫೆ. 22 ಕೊನೆಯ ದಿನಾಂಕವಾಗಿದ್ದು, ಹೆಚ್ಚಿನ ಮಾಹಿತಿಗೆ ಹರಿಹರದ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಪ್ರಾಂಶುಪಾಲರು ಇವರನ್ನುದೂ.ಸಂ-08192-243937,9035372971, 9538932602, 8884588202 ಸಂಪರ್ಕಿಸಬಹುದು.

## ನಗರದ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆ ಎನ್‌ಬಿಎ ಮಾನ್ಯತೆ

ದಾವಣಗೆರೆ, ಫೆ. 7 - ನಗರದ ಜೈನ್ ತಾಂತ್ರಿಕ ಮಹಾವಿದ್ಯಾಲಯದ ಮೂರು ಕಾರ್ಯಕ್ರಮಗಳಾದ ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಇಂಜಿನಿಯರಿಂಗ್ ಮತ್ತು ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಅನ್ನು ನ್ಯಾಷನಲ್ ಬೋರ್ಡ್ ಆಫ್ ಅಕ್ರೆಡಿಟೇಶನ್ (ಎನ್‌ಬಿಎ), ನವದೆಹಲಿಯಿಂದ ಮಾನ್ಯತೆ ಪಡೆದಿದೆ ಎಂದು ಪ್ರಾಂಶುಪಾಲರು ತಿಳಿಸಿದ್ದಾರೆ.

## ಅತಿ ಸಣ್ಣ ವೃತ್ತಿಪರ ಕುಶಲಕರ್ಮಿಗಳಿಗೆ ಸಾಲ ಸಹಾಯ ಧನ ಸೌಲಭ್ಯ

ದಾವಣಗೆರೆ, ಫೆ.7- ವಿವಿಧ ವೃತ್ತಿಯ ಕುಶಲಕರ್ಮಿಗಳಿಗೆ ಸಾಲ-ಸಹಾಯ ಧನ ಯೋಜನೆಯಡಿ ವೃತ್ತಿ ಚಟುವಟಿಕೆಯನ್ನು ಮುಂದುವರೆಸಲು ವಾಣಿಜ್ಯ ಬ್ಯಾಂಕ್‌ಗಳು, ಸಹಕಾರ ಬ್ಯಾಂಕ್, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಗಳಿಂದ ಸಹಾಯ ಧನ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ರೂ. 50,000/- ಗಳ ವರೆಗೆ ಸಾಲ ಸೌಲಭ್ಯ ಹಾಗೂ ಇಲಾಖೆ ವತಿಯಿಂದ ಗರಿಷ್ಠ ರೂ.15,000/- ಸಹಾಯ ಧನ ಪಡೆಯಬ ಹುದು. ಅರ್ಜಿ ಸಲ್ಲಿಸಲು ಅರ್ಹವಿರುವ ಚಟುವಟಿಕೆ, ವೃತ್ತಿಗಳಾದ ಕ್ಷೌರಿಕ, ಚಮ್ಮಾರಿಕೆ ಮತ್ತು ದೋಬಿ ವೃತ್ತಿಗಳನ್ನು ಸೇರ್ಪಡೆ ಮಾಡಲಾಗಿದೆ. ಈ ವೃತ್ತಿಯ ಕುಶಲ ಕರ್ಮಿಗಳು ಸಾಲ ಸೌಲಭ್ಯಕ್ಕಾಗಿ ನಿಗದಿತ ಅರ್ಜಿಗಳನ್ನು ಜಿಲ್ಲಾ ಕೈಗಾರಿಕಾ ಕೇಂದ್ರ ದಾವಣಗೆರೆ ಇಲ್ಲಿ ಪಡೆದು ಅಗತ್ಯ ದಾಖಲೆಗಳೊಂದಿಗೆ ಕಚೇರಿಗೆ ಸಲ್ಲಿಸಬೇಕೆಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

## ಎನ್.ಎಂ.ಸಿ. ಹುದ್ದೆಗೆ ಪ್ರಹ್ಲಾದ್ ಜೋಶಿ ಕಚೇರಿಗೆ ಲಂಚ : ಆರೋಪ

**(3ನೇ ಪುಟದಿಂದ)** ಸುತ್ತಿರುವ ಜಿತೇಂದ್ರ ಕುಮಾರ್ ಎಂಬುವವರ ಬ್ಯಾಂಕ್ ಖಾತೆಗೆ 2021ರ ಜುಲೈನಲ್ಲಿ 2 ಕೋಟಿ ರೂ. ವರ್ಗಾವಣೆ ಮಾಡಲಾಗಿದೆ. 50 ಲಕ್ಷ ರೂ. ನಗದು ರೂಪದಲ್ಲಿ ನೀಡಲಾಗಿದೆ ಎಂದವರು ಆರೋಪಿಸಿದರು.

ಈ ಪ್ರಕರಣದ ಕುರಿತು ಉನ್ನತ ಮಟ್ಟದ ತನಿಖೆ ನಡೆಸಬೇಕು. ಇದರಲ್ಲಿ ಜೋಷಿ ಪಾತ್ರ ಏನು? ಎಂಬುದು ತನಿಖೆಯಿಂದ ಹೊರಬರಬೇಕು ಎಂದು ಆಗ್ರಹಿಸಿದರು.

## ಗೌರಿ ಜಡ್ಜ್ ಆಗಲು ಸುಪ್ರೀಂ ತಡೆಯಿಲ್ಲ

**(3ನೇ ಪುಟದಿಂದ)** ನ್ಯಾಯಮೂರ್ತಿ ಮಾಡಬಾರದು ಎಂಬ ಅರ್ಜಿಯ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ನಡೆಯುವ ವೇಳೆಯೇ ಅವರು ಪ್ರಮಾಣ ವಚನ ಸ್ವೀಕರಿಸಿದರು.

ಸುಪ್ರೀಂ ಕೋರ್ಟ್‌ನ ಕೊಲೀಜಿಯಂ ಈ ಹಿಂದೆ ಗೌರಿ ಅವರ ನೇಮಕಕ್ಕೆ ಶಿಫಾರಸ್ಸು ಮಾಡಿತ್ತು.

ಈ ಶಿಫಾರಸ್ಸು ಮರು ಪರಿಶೀಲಿಸುವಂತೆ ಕೊಲೀಜಿಯಂಗೆ ತಿಳಿಸಬೇಕು ಎಂದು ಅರ್ಜಿ ದಾಖಲಿಸಲಾಗಿತ್ತು. ಆದರೆ, ಕೊಲೀಜಿಯಂ ತನ್ನ ನಿರ್ಧಾರ ಮರು ಪರಿಶೀಲಿಸುವಂತೆ ತಿಳಿಸಲಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

# ಅದಾನಿ ಬೆಳವಣಿಗೆಗೆ ಮೋದಿ ಸಂಬಂಧ

**(3ನೇ ಪುಟದಿಂದ)** ಎಷ್ಟು ಬಾರಿ ಆ ದೇಶಕ್ಕೆ ಹೋಗಿದ್ದಾರೆ? ಕಳೆದ 20 ವರ್ಷಗಳಲ್ಲಿ ಚುನಾವಣಾ ಬಾಂಡ್ ಮೂಲಕ ಎಷ್ಟು ಹಣ ಬಿಜೆಪಿಗೆ ಕೊಟ್ಟಿದ್ದಾರೆ? ಎಂದು ಗಾಂಧಿ ಪ್ರಶ್ನಿಸಿದರು.

ವಿಮಾನ ನಿಲ್ದಾಣಗಳ ಅನುಭವ ಇಲ್ಲದೇ ಇರುವವರಿಗೆ ಅವುಗಳನ್ನು ನೀಡಬಾರದು ಎಂಬ ನಿಯಮವಿತ್ತು. ಸರ್ಕಾರ ಆ ನಿಯಮ ಬದಲಿಸಿ ಅದಾನಿಗೆ ಆರು ವಿಮಾನ ನಿಲ್ದಾಣ ಕೊಟ್ಟಿದೆ. ವ್ಯೂಹಾತ್ಮಕವಾಗಿ ಪ್ರಮುಖವಾದ, ಲಾಭದಾಯಕವಾದ ಮುಂಬೈ ವಿಮಾನ ನಿಲ್ದಾಣವನ್ನು ಜಿ.ವಿ.ಕೆ.ಯಿಂದ ಪಡೆಯಲಾಯಿತು. ಸಂಸ್ಥೆಗಳನ್ನು ಬಳಸಿ ಹೈಜಾಕ್ ಮಾಡಲಾಯಿತು. ಸಿಬಿಐ ಹಾಗೂ ಇ.ಡಿ.ಗಳ ಒತ್ತಡ ಹಾಕಿ ಜಿ.ವಿ.ಕೆ.ಯಿಂದ ಪಡೆದು ಅದಾನಿಗೆ ಕೊಡಲಾಯಿತು ಎಂದವರು ಆರೋಪಿಸಿದರು.

ಶೇ.24ರ ವಿಮಾನಯಾನ ಹಾಗೂ ಶೇ.31ರ ಸರಕು ಸಾಗಣೆ ನಿರ್ವಹಿಸುವ ನಿಲ್ದಾಣಗಳನ್ನು ಅದಾನಿ ಸಮೂಹಕ್ಕೆ ವಹಿಸಲಾಗಿದೆ. ಕೇಂದ್ರ ಸರ್ಕಾರ ಹಾಗೂ ಪ್ರಧಾನ ಮಂತ್ರಿ ಇದಕ್ಕೆ ವ್ಯವಸ್ಥೆ ಮಾಡಿದ್ದಾರೆ ಎಂದು ಆರೋಪಿಸಿದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಇಸ್ರೇಲ್‌ಗೆ ಭೇಟಿ ನೀಡಿದ ನಂತರ ಅದಾನಿಗೆ ಗುತ್ತಿಗೆ ನೀಡಲಾಗಿದೆ. ಭಾರತ – ಇಸ್ರೇಲ್ ಶಸ್ತ್ರಾಸ್ತ್ರಗಳ ಶೇ.90ರ ಗುತ್ತಿಗೆಯನ್ನು ಅದಾನಿಗೆ ನೀಡಲಾಗಿದೆ ಎಂದವರು ಆರೋಪಿಸಿದರು.

ಈ ಬಗ್ಗೆ ತಿರುಗೇಟು ನೀಡಿದ ಕಾನೂನು ಸಚಿವ ಕಿರಣ್ ರಿಜಿಜು, ಹೊರಗಡೆ ಏನಾದರೂ ಮಾತನಾಡಿಕೊಳ್ಳಿ. ಸದನದಲ್ಲಿ ಗಂಭೀರವಾಗಿರ ಬೇಕು ಎಂಬ ನಿರೀಕ್ಷೆ ಇದೆ. ಅರ್ಥಹೀನ ಆರೋಪ ಮಾಡುವ ಬದಲು ಸಾಕ್ಷಿ ಕೊಡಿ ಎಂದರು.

### ರಾಹುಲ್ ಗಾಂಧಿ ಆರೋಪ ತಳ್ಳಿ ಹಾಕಿದ ಜಿ.ವಿ.ಕೆ.

ನವದೆಹಲಿ, ಫೆ. 7 – ತಮ್ಮ ಮೇಲೆ ಒತ್ತಡ ಹಾಕುವ ಮೂಲಕ ಮುಂಬೈ ವಿಮಾನ ನಿಲ್ದಾಣವನ್ನು ಅದಾನಿ ಸಮೂಹಕ್ಕೆ ಕೊಡುವಂತೆ ಮಾಡಲಾಯಿತು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿರುವುದನ್ನು ಜಿ.ವಿ.ಕೆ. ಉಪಾಧ್ಯಕ್ಷ ಜಿ.ವಿ. ಸಂಜಯ್ ರೆಡ್ಡಿ ತಳ್ಳಿ ಹಾಕಿದ್ದಾರೆ.

ಅದಾನಿ ಸಮೂಹದಿಂದಲೇ ಆಗಲಿ, ಬೇರೆ ಯಾರಿಂದಲೇ ಆಗಲಿ ಮುಂಬೈ ವಿಮಾನ ನಿಲ್ದಾಣ ಮಾರಲು ಯಾವುದೇ ಒತ್ತಡ ಇರಲಿಲ್ಲ ಎಂದವರು ಹೇಳಿದ್ದಾರೆ.

ನಾವು ಪಡೆದ ಸಾಲ ವಾಪಸ್ ನೀಡಬೇಕಿತ್ತು. ಕೊರೊನಾ ಕಾರಣದಿಂದ ವಿದೇಶಿ ಹೂಡಿಕೆದಾರರನ್ನು ಸೆಳೆಯುವುದು ಕಠಿಣವಾಗಿತ್ತು. ಆ ಸಂದರ್ಭದಲ್ಲಿ ಅದಾನಿ ಸಮೂಹದ ಗೌತಮ್ ಅದಾನಿ ವಿಮಾನ ನಿಲ್ದಾಣ ಖರೀದಿಸಿದರು ಎಂದು ಹೇಳಿದರು.

## ಪತ್ರಕರ್ತ ಆರ್.ಜಿ. ಹಳ್ಳಿ ನಾಗರಾಜ್‌ಗೆ 'ನಾಡಪ್ರಭು ಕೆಂಪೇಗೌಡ ಪ್ರಶಸ್ತಿ' ಪ್ರದಾನ



ಬೆಂಗಳೂರು, ಫೆ. 7- ಪತ್ರಿಕೋದ್ಯಮದಲ್ಲಿ ಸಲ್ಲಿಸಿದ ಅನುಪಮ ಸೇವೆಗಾಗಿ ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘ ಕೊಡಮಾಡುವ ಪ್ರತಿಷ್ಠಿತ "ನಾಡಪ್ರಭು ಕೆಂಪೇಗೌಡ ಪ್ರಶಸ್ತಿ"ಯನ್ನು ಹಿರಿಯ ಪತ್ರಕರ್ತ ಆರ್.ಜಿ. ಹಳ್ಳಿ ನಾಗರಾಜ್ ಅವರಿಗೆ ಶಾಸಕರು, ಬೃಹತ್ ನೀರಾವರಿ ಇಲಾಖೆಯ ಮಾಜಿ ಸಚಿವ ಎಂ.ಬಿ. ಪಾಟೀಲ್ ನೀಡಿ ಗೌರವಿಸಿದರು. ವಿಜಯಪುರದ ಕಂದಗಲ್ ಹಣಮಂತರಾಯ ರಂಗಮಂದಿರದಲ್ಲಿ ಈಚೆಗೆ ನಡೆದ 37ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ, ಭಾನುವಾರ ಈ ಪ್ರಶಸ್ತಿ ಪ್ರದಾನ ಮಾಡಲಾಯಿತು. ಇದೇ ಸಂದರ್ಭದಲ್ಲಿ ಪತ್ರಕರ್ತರಾದ ಗಂಗಾಧರ ಕುಷ್ಟಗಿ, ಪುಟ್ಟಸೋಮಾರಾಧ್ಯ ಅವರಿಗೂ ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಸಂದರ್ಭ ಅಧ್ಯಕ್ಷ ಶಿವಾನಂದ ತಗಡೂರು ಉಪಸ್ಥಿತರಿದ್ದರು.

## ಜೆ.ಇ.ಇ. ಮೇನ್ : ಮಾಗನೂರು ಬಸಪ್ಪ ಕಾಲೇಜಿನ ಪ್ರಥಮ್‌ಗೆ ಶೇ. 97.16



ದಾವಣಗೆರೆ, ಫೆ.7- ಐಐಟಿ, ಎನ್ಐಟಿ, ಐಐಐಟಿ, ಇಂಜಿನಿಯರಿಂಗ್ ಪದವಿಯ ಪ್ರವೇಶಕ್ಕೆ ನಡೆಸಲಾಗುವ ಜೆಇಇ ಮೇನ್ ಪರೀಕ್ಷೆಯ ಮೊದಲ ಹಂತ ಜನವರಿ 2023 ರಂದು ಆನ್‌ಲೈನ್ ಪರೀಕ್ಷೆಯ ಮೂಲಕ ನಡೆಸಲಾಯಿತು. ಸುಮಾರು 8.2 ಲಕ್ಷ ವಿದ್ಯಾರ್ಥಿಗಳು ರಾಷ್ಟ್ರದಲ್ಲಿ ಜೆಇಇ ಮೇನ್ ಪರೀಕ್ಷೆ ಬರೆದಿದ್ದರು.

ನಗರದ ಮಾಗನೂರು ಬಸಪ್ಪ ಕಾಲೇಜಿನ ವಿದ್ಯಾರ್ಥಿ ಪ್ರಥಮ್ ಪಿ. ಪಾಲಂಕರ್ 97.16 ಪರ್ಸೆಂಟೈಲ್ ಅಂಕವನ್ನು ಪಡೆದಿದ್ದು, ಕಾಲೇಜಿಗೆ ಹಾಗೂ ಜಿಲ್ಲೆಗೆ ಕೀರ್ತಿ ತಂದಿರುತ್ತಾನೆ.

ಮಾಗನೂರು ಬಸಪ್ಪ ಕಾಲೇಜಿನ ಒಟ್ಟು 62 ವಿದ್ಯಾರ್ಥಿಗಳು ಜೆ.ಇ.ಇ ಮೇನ್ ಪರೀಕ್ಷೆ ತೆಗೆದುಕೊಂಡಿದ್ದು, ಅದರಲ್ಲಿ ಅಂದಾಜು 43 ವಿದ್ಯಾರ್ಥಿಗಳು ಜೆ.ಇ.ಇ-ಅಡ್ವಾನ್ಸ್ಡ್ (ಐ.ಐ.ಟಿ) ಪರೀಕ್ಷೆ ಬರೆಯಲು ಅರ್ಹತೆ ಪಡೆದಿರುತ್ತಾರೆ. ಜೆ.ಇ.ಇ ಮೇನ್‌ನಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಸಂಗಮೇಶ್ವರ ಗೌಡರು, ನಿರ್ದೇಶಕರಾದ ಡಾ. ಜಿ.ಎನ್.ಹೆಚ್. ಕುಮಾರ್, ಪ್ರಾಚಾರ್ಯ ಎಸ್.ಪ್ರಸಾದ್ ಬಂಗೇರ ಅಭಿನಂದನೆ ಸಲ್ಲಿಸಿರುತ್ತಾರೆ.

### ಶ್ರೀಮತಿ ಎಸ್. ಪ್ರಮೀಳ ನಿಧನ



ದಾವಣಗೆರೆ ದೇವಾಂಗ ಪೇಟೆ ವಿನಾಯಕ ಸ್ಕೂಲ್ ಹಿಂಭಾಗ ಕನ್ಸರ್‌ವೆನ್ಸಿ ವಾಸಿ ದಿ. ಹೂಗಾರ ವೆಂಕಟೇಶಪ್ಪ ಅವರ ಧರ್ಮಪತ್ನಿ ಶ್ರೀಮತಿ ಎಸ್.ಪ್ರಮೀಳ (67) ಇವರು ದಿನಾಂಕ 07.02.2023ರ ಮಂಗಳವಾರ ಬೆಳಿಗ್ಗೆ 7ಕ್ಕೆ ನಿಧನರಾದರು. ಓರ್ವ ಪುತ್ರ, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 08.02.2023ರ ಬುಧವಾರ ಮಧ್ಯಾಹ್ನ 12ಕ್ಕೆ ನಗರದ ಪಿ.ಬಿ ರಸ್ತೆಯ ವೈಕುಂಠಧಾಮದಲ್ಲಿ ನೆರವೇರಲಿದೆ.

### ಚಾಟಿ ಎ.ಜಿ. ಮಲ್ಲೇಶಪ್ಪ ನಿಧನ



ದಾವಣಗೆರೆ ತಾಲ್ಲೂಕು ಮಾಯಕೊಂಡ ಗ್ರಾಮದ ನಿವಾಸಿ ಚಾಟಿ ಎ.ಜಿ. ಮಲ್ಲೇಶಪ್ಪ (46) ಇವರು ದಿನಾಂಕ 07.02.2023ರ ಮಂಗಳವಾರ ಸಂಜೆ 6.20ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಸಹೋದರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 08.02.2023ರ ಬುಧವಾರ ಮಧ್ಯಾಹ್ನ 2ಕ್ಕೆ ದಾವಣಗೆರೆ ತಾಲ್ಲೂಕು ಮಾಯಕೊಂಡ ಗ್ರಾಮದಲ್ಲಿ ನೆರವೇರಲಿದೆ.

### ಶಾಮನೂರು ಯಲವಟ್ಟಿ ಹೆಚ್. ಹೀಮಂತರಾಜು ನಿಧನ



ದಾವಣಗೆರೆ ಶಾಮನೂರು ವಾಸಿ,

**ಯಲವಟ್ಟಿ ಹೆಚ್.ಹೀಮಂತರಾಜು**

ಅವರು ದಿನಾಂಕ 07.02.2023ರ ಮಂಗಳವಾರ ಮಧ್ಯಾಹ್ನ 2ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ ಸುಮಾರು 65 ವರ್ಷ ವಯಸ್ಸಾಗಿತ್ತು.

ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 08.02.2023ರ ಬುಧವಾರ ಮಧ್ಯಾಹ್ನ 12ಕ್ಕೆ ಗ್ಲಾಸ್ ಹೌಸ್ ಪಕ್ಕ, ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

**ಮೊ : 95382 94260, 97403 74615**

### ನೀಲಗುಂದ ಮಲ್ಲಿಕಾರ್ಜುನ ನಿಧನ



ದಾವಣಗೆರೆಯ

ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆ ವಾಸಿ,

**ಅಕ್ಕಿ ವ್ಯಾಪಾರಿಗಳಾದ**

**ಶ್ರೀ ನೀಲಗುಂದ ಮಲ್ಲಿಕಾರ್ಜುನ**

ಅವರು, ದಿನಾಂಕ 07.02.2023ರ ಮಂಗಳವಾರ ಮಧ್ಯಾಹ್ನ 12.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ ಸುಮಾರು 63 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂದು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 07.02.2023ರ ಮಂಗಳವಾರ ಸಂಜೆ 6ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.


**ಮೃತರ ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 11.02.2023ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಶ್ರೀಮತಿ ಪಾರ್ವತಮ್ಮ ಡಾ. ಶಾಮನೂರು ಶಿವಶಂಕರಪ್ಪ ಸಮುದಾಯನ ಭವನ, ವಿನೋಬ ನಗರ, 1ನೇ ಮುಖ್ಯರಸ್ತೆ, ದಾವಣಗೆರೆ ಇಲ್ಲಿ ನೆರವೇರಿಸಲಾಗುವುದು.**

**ದುಃಖತಪ್ತ ಕುಟುಂಬ ವರ್ಗ**

**ಪತ್ನಿ, ಶ್ರೀಮತಿ ಮಂಜುಳ ನೀಲಗುಂದ ಮಲ್ಲಿಕಾರ್ಜುನ**

|| ಶ್ರೀ ಕುರುಗೋಡು ಬಸವೇಶ್ವರ ಪ್ರಸನ್ನ ||

### ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ ವಾಸಿ

**ಶ್ರೀಮತಿ ಸುಮ ತುರುವನೂರು**

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 30.01.2023ನೇ ಸೋಮವಾರ ಸಂಜೆ 05.20ಕ್ಕೆ ನನ್ನ ಪೂಜ್ಯ ಪತಿಯವರಾದ

**ನೇತ್ರದಾನಿ**

**ಶ್ರೀ ಟಿ.ಎನ್. ಗಿರಿಯಪ್ಪ**

ನಿವೃತ್ತ ಕಿರಿಯ ಸಹಾಯಕರು, ಬೆಸ್ಕಾಂ, ದಾವಣಗೆರೆ

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆ'ಯನ್ನು**

ದಿನಾಂಕ : 09.02.2023ನೇ ಗುರುವಾರ ಬೆಳಿಗ್ಗೆ 11 ಕ್ಕೆ ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ, 1ನೇ ಮೇನ್, 5ನೇ ಕ್ರಾಸ್, 'ಎ' ಬ್ಲಾಕ್, ಸುರಕ್ಷ ಆಸ್ಪತ್ರೆ ರೋಡ್, ಮನೆ ನಂ.1790/38ರ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**: ದುಃಖತಪ್ತರು :**

**ಶ್ರೀಮತಿ ಸುಮ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.**

**ಫೋ. : 99643 66567, 77950 82565**

**ವಿ.ಸೂ. : ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.**

### ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀಮತಿ ಶಶಿಕಲಾ ಆರ್.ಪಾಟೀಲ್ w/o ಆರ್.ಪಿ. ಪಾಟೀಲ್** ಮ.ಸಂ.2000/84, 13ನೇ ಕ್ರಾಸ್, ತರಳಬಾಳು ಬಡಾವಣೆ, ದಾವಣಗೆರೆ ವಾಸಿ ಇವರು ದಿನಾಂಕ. 3.11.1998ರಂದು ದಾವಣಗೆರೆ ಸಿಟಿ ವಾಸಿ 5ನೇ ವಾರ್ಡ್, 8ನೇ ಡಿವಿಜನ್, ಕೆ.ಟಿ.ಜೆ ನಗರದ ವಾಸಿ **ಶ್ರೀ ಬಸಪ್ಪ ಹಾವೇರಿ ಬಿನ್ ಶ್ರೀ ಮಲ್ಲಪ್ಪ** ಇವರಿಂದ ದಾವಣಗೆರೆ ತಾಲ್ಲೂಕು ಶ್ಯಾಬನೂರು ಗ್ರಾಮದ **ರಿ.ಸರ್ವೆ ನಂ.141-1 Pಯ ಸೈಟ್ ನಂ.8, ಪಂಚಾಯತಿ ಡೋರ್ ನಂ. 5385-8 (ಅಳತೆ 30x44 ಅಡಿ)** ನ್ನು ಖರೀದಿಸಿದ್ದು, ಅವರು ಈ ಸ್ವತ್ತಿನ ಏಕಸ್ವಾಮ್ಯ ಮಾಲೀಕರಾಗಿರುತ್ತಾರೆ. ಈ ನಿವೇಶನವನ್ನು ಅವರ ಅನುಮತಿ ಇಲ್ಲದೇ ಪರಭಾರೆ ಮಾಡುವುದು ಕಾನೂನು ಬಾಹಿರವಾಗಿರುತ್ತದೆ ಎಂದು ಈ ಮೂಲಕ ನಾನು ಸಾರ್ವಜನಿಕ ಪ್ರಕಟಣೆ ನೀಡುತ್ತಿದ್ದೇನೆ.

**ದಿನಾಂಕ : 07.02.2023**
**ಸ್ಥಳ : ದಾವಣಗೆರೆ**

**ಶ್ರೀ ಕೆ.ಎನ್. ನಾರಪ್ಪ**
**ವಕೀಲರು, ದಾವಣಗೆರೆ.**

# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಬುಧವಾರ, ಫೆಬ್ರವರಿ 08, 2023


## ಜಗಳೂರು ಹೊರತಾಗಿ ರಾಗಿ ಖರೀದಿ ಥಂಡ

### ಸಣ್ಣ ರೈತರ ಜೊತೆ ದೊಡ್ಡ ರೈತರಿಂದಲೂ ರಾಗಿ ಖರೀದಿಸುವಂತೆ ರೈತರ ಒತ್ತಾಯ



ದಾವಣಗೆರೆ, ಫೆ. 7 - ಬೆಂಬಲ ಬೆಲೆಯಲ್ಲಿ ರಾಗಿ ಖರೀದಿ ಪ್ರಕ್ರಿಯೆ ಆರಂಭವಾಗಿ ಎರಡನೇ ವಾರವಾಗಿದ್ದರೂ, ಜಗಳೂರು ಹೊರತು ಪಡಿಸಿದರೆ ಜಿಲ್ಲೆಯ ಉಳಿದೆಡೆ ಖರೀದಿ ಪ್ರಕ್ರಿಯೆ ಇನ್ನೂ ಚುರುಕು ಪಡೆದುಕೊಂಡಿಲ್ಲ.

ಕಳೆದ ವರ್ಷಗಳಿಗೆ ಹೋಲಿಸಿದರೆ ಈ ಬಾರಿ ರಾಗಿ ಮಾರಲು ನೋಂದಾಯಿಸಿಕೊಂಡ ರೈತರ ಸಂಖ್ಯೆಯೇ ಕಡಿಮೆ. ನೋಂದಣಿ ಮಾಡಿಸಿಕೊಂಡವರೂ ಖರೀದಿ ಕೇಂದ್ರಗಳಿಗೆ ಬರುವುದು ಚುರುಕಾಗಿಲ್ಲ. ನೋಂದಣಿ ಮಾಡಿಕೊಂಡ ರೈತರು ಮಾರ್ಚ್ 31ರವರೆಗೆ ಮಾರಲು ಅವಕಾಶವಿದೆ.

ಜಿಲ್ಲೆಯ 8,305 ರೈತರು 1,55,525 ಕ್ವಿಂಟಾಲ್ ರಾಗಿ ಮಾರಲು ನೋಂದಣಿ ಮಾಡಿಕೊಂಡಿದ್ದರು. ರಾಗಿ ಖರೀದಿಗಾಗಿ ದಾವಣಗೆರೆ, ಜಗಳೂರು ಹಾಗೂ ಚನ್ನಗಿರಿಗಳಲ್ಲಿ ಕಳೆದ ಜನವರಿ 27ರಂದು ಹಾಗೂ ಹರಿಹರ ಮತ್ತು ಹೊನ್ನಾಳಿಗಳಲ್ಲಿ ಜನವರಿ 30ರಂದು ಕೇಂದ್ರಗಳನ್ನು ತೆರೆಯಲಾಗಿತ್ತು. ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಮೂಲಕ ಖರೀದಿ ನಡೆಯುತ್ತಿದೆ.

ಜಗಳೂರಿನಲ್ಲಿ ಇದುವರೆಗೂ 1,112 ರೈತರಿಂದ 22,450 ಕ್ವಿಂಟಾಲ್ ರಾಗಿ ಖರೀದಿಸಲಾಗಿದೆ. ಉಳಿದ ಕೇಂದ್ರಗಳಲ್ಲಿ ರಾಗಿ ಮಾರಿದ ರೈತರ ಸಂಖ್ಯೆ 200 ದಾಟಿಲ್ಲ. ಹೊನ್ನಾಳಿಯಲ್ಲಿ ಅತಿ ಕಡಿಮೆ 46 ರೈತರು 573 ಕ್ವಿಂಟಾಲ್ ರಾಗಿ ಮಾರಿದ್ದಾರೆ. ಹರಿಹರದಲ್ಲಿ 200 ರೈತರು 4 ಸಾವಿರ ಕ್ವಿಂಟಾಲ್ ಹಾಗೂ ಚನ್ನಗಿರಿಯಲ್ಲಿ 138 ರೈತರು 2,616 ಕ್ವಿಂಟಾಲ್ ರಾಗಿ ಮಾರಿದ್ದಾರೆ. ಜಿಲ್ಲೆಯಲ್ಲಿ ಒಟ್ಟಾರೆ 1,628 ರೈತರು 32,152 ಕ್ವಿಂಟಾಲ್ ರಾಗಿಯನ್ನು ಇದುವರೆಗೂ ಖರೀದಿ ಕೇಂದ್ರಗಳಲ್ಲಿ ಮಾರಾಟ ಮಾಡಿದ್ದಾರೆ.

ದಾವಣಗೆರೆಯ ಎ.ಪಿ.ಎಂ.ಸಿ. ಯಾರ್ಡ್‌ನಲ್ಲಿರುವ ರಾಗಿ ಖರೀದಿ ಕೇಂದ್ರಕ್ಕೆ ಭೇಟಿ ನೀಡಿದಾಗ ಒಬ್ಬಿಬ್ಬರು ರೈತರು ಮಾತ್ರ ಕಂಡು ಬಂದರು. ದಿನಕ್ಕೆ ಎಂಟು ಹತ್ತು ರೈತರು ಮಾತ್ರ ಖರೀದಿ ಕೇಂದ್ರದ ಕಡೆ ರಾಗಿ ತರುತ್ತಿದ್ದಾರೆ.

ದಾವಣಗೆರೆ ತಾಲ್ಲೂಕಿನಲ್ಲಿ 587 ರೈತರು 10,835 ಕ್ವಿಂಟಾಲ್ ರಾಗಿ ಮಾರಾಟಕ್ಕೆ ನೋಂದಣಿ ಮಾಡಿಕೊಂಡಿದ್ದರು. ಅವರ ಪೈಕಿ 132 ರೈತರು ಮಾತ್ರ ಇದುವರೆಗೂ 2,513 ಕ್ವಿಂ. ರಾಗಿ ಮಾರಿದ್ದಾರೆ.

ಕೆಲ ರೈತರ ಆಧಾರ್ ಹಾಗೂ ಬ್ಯಾಂಕ್ ಖಾತೆಗಳ ಹೆಸರು ಮತ್ತು ಜನ್ಮ ದಿನಾಂಕದಲ್ಲಿ ವ್ಯತ್ಯಾಸವಿದೆ. ಇಂತಹ ಸಂದರ್ಭಗಳಲ್ಲಿ ಅವರ ಖಾತೆಗಳಿಗೆ ಹಣ ಜಮಾ ಆಗಲು ಸಾಧ್ಯವಾಗುತ್ತಿಲ್ಲ. ಈ ಲೋಪವನ್ನು ಫ್ರೂಟ್ಸ್ ತಂತ್ರಾಂಶದಲ್ಲಿ ಸರಿ ಪಡಿಸಿಕೊಳ್ಳುವಂತೆ ಅಧಿಕಾರಿಗಳು ತಿಳಿಸುತ್ತಿದ್ದಾರೆ.

ಖರೀದಿ ಕೇಂದ್ರಕ್ಕೆ ಸಣ್ಣ ರೈತರು ಬರುತ್ತಿದ್ದಾರೆ. ಇವರಿಂದ ಪಡೆಯುತ್ತಿರುವ ಹಮಾಲಿ ದರ ಹೆಚ್ಚಾಗಿದೆ ಎಂಬ ಆಕ್ಷೇಪಗಳು ಕೆಲ ರೈತರಿಂದ ಕೇಳಿ ಬಂದಿವೆ.

ರಾಗಿ ಖರೀದಿ ಕೇಂದ್ರಕ್ಕೆ ಆಗಮಿಸಿದ್ದ ಆಲೂರಿನ ರೈತ ಚಂದ್ರಪ್ಪ ಹಿತ್ತಲಮನಿ ಪತ್ರಿಕೆಯೊಂದಿಗೆ ಮಾತನಾಡಿ, ರಾಗಿ ಖರೀದಿ ಪ್ರಕ್ರಿಯೆ ಈ ಬಾರಿ ಸುಲಭವಾಗಿ ಪೂರ್ಣಗೊಂಡಿದೆ. ಆದರೆ, ಸರ್ಕಾರ ಸಣ್ಣ ರೈತರಿಂದಷ್ಟೇ ಖರೀದಿ ಮಾಡುವುದಾಗಿ ಹೇಳಿರುವುದು ಸರಿಯಲ್ಲ. ದೊಡ್ಡ ರೈತರಿಂದಲೂ ಖರೀದಿ ಪ್ರಕ್ರಿಯೆಗೆ ಮುಂದಾಗ ಬೇಕು ಎಂದು ಅಭಿಪ್ರಾಯ ಪಟ್ಟರು.

## ಅದಾನಿ ಬೆಳವಣಿಗೆಗೆ ಮೋದಿ ಸಂಬಂಧ

### ಮೋದಿ - ಅದಾನಿ ಅವರಿದ್ದ ಚಿತ್ರ ಪ್ರದರ್ಶಿಸಿ ರಾಹುಲ್ ಗಾಂಧಿ ಆರೋಪ



ನವದೆಹಲಿ, ಫೆ. 7 – ಗೌತಮ್ ಅದಾನಿ ನೇತೃತ್ವದ ಸಮೂಹದ ಬೆಳವಣಿಗೆಗೂ, ಮೋದಿ ಸರ್ಕಾರ 2014ರಲ್ಲಿ ಅಧಿಕಾರಕ್ಕೆ ಬಂದಿರುವುದಕ್ಕೂ ಸಂಬಂಧ ಇದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ರಾಷ್ಟ್ರಪತಿ ಭಾಷಣಕ್ಕೆ ಧನ್ಯವಾದ ಸಲ್ಲಿಸುವ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ರಾಹುಲ್ ಗಾಂಧಿ, ಅದಾನಿ ಸಮೂಹಕ್ಕೆ ಸಂಬಂಧಿಸಿದಂತೆ ಟೀಕಾ ಪ್ರಹಾರ ನಡೆಸಿದರು. ಮೋದಿ ಹಾಗೂ ಅದಾನಿ ಅವರಿದ್ದ ಚಿತ್ರವನ್ನೂ ಅವರು ಪ್ರದರ್ಶಿಸಿದರು.

2014ರಲ್ಲಿ ಶ್ರೀಮಂತರ ಪಟ್ಟಿಯಲ್ಲಿ ಅದಾನಿ 609ನೇ ಸ್ಥಾನದಲ್ಲಿದ್ದರು. ಮೋದಿ ಸರ್ಕಾರದಲ್ಲಿ ಅದಾನಿ 2ನೇ ಸ್ಥಾನಕ್ಕೇರಿದ್ದಾರೆ. ಇದು ಹೇಗೆ ಸಾಧ್ಯ ? ಎಂದು ರಾಹುಲ್ ಗಾಂಧಿ ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದರು.

2014 ರಿಂದ 2022ರ ನಡುವೆ ಅದಾನಿ ಆಸ್ತಿ ಮೌಲ್ಯ 8 ಶತಕೋಟಿ ಡಾಲರ್‌ಗಳಿಂದ 140 ಶತಕೋಟಿ ಡಾಲರ್‌ಗಳಿಗೆ ಹೆಚ್ಚಾಗಿದೆ. ಬಿಜೆಪಿ ಅಧಿಕಾರಕ್ಕೆ ಬಂದಾಗ ಈ ಮ್ಯಾಜಿಕ್ ಆರಂಭವಾಗಿದೆ ಎಂದವರು ಆರೋಪಿಸಿದರು.

ದೇಶದೆಲ್ಲೆಡೆ ಅದಾನಿ ಹೆಸರು ಕೇಳಿ ಬರುತ್ತದೆ. ಅವರು ಯಾವುದೇ ಉದ್ಯಮಕ್ಕೆ ಹೋದರೂ ವಿಫಲವಾಗುವುದಿಲ್ಲ. ಅವರ ಹಾಗೂ ಪ್ರಧಾನ ಮಂತ್ರಿ ನಡುವಿನ ಸಂಬಂಧ ಏನು? ಎಂದವರು ಪ್ರಶ್ನಿಸಿದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಎಷ್ಟು ಬಾರಿ ಅದಾನಿಯವರನ್ನು ವಿದೇಶ ಪ್ರವಾಸಕ್ಕೆ ಕರೆದುಕೊಂಡು ಹೋಗಿದ್ದಾರೆ? ಎಷ್ಟು ಬಾರಿ ಅದಾನಿ ನಂತರದಲ್ಲಿ ಭೇಟಿಗೆ ಸೇರಿದ್ದಾರೆ? ನಿಮ್ಮ ಭೇಟಿಯ ನಂತರ ಅದಾನಿ (2ನೇ ಪುಟಕ್ಕೆ)

### ಅದಾನಿಯಿಂದ ಬ್ಯಾಂಕುಗಳಿಗೆ ಸಮಸ್ಯೆಯಾಗದು : ಫಿಚ್

ನವದೆಹಲಿ, ಫೆ. 7 – ಅದಾನಿ ಸಮೂಹದಲ್ಲಿ ಭಾರತೀಯರು ಮಾಡಿರುವ ಹೂಡಿಕೆಯಿಂದ ಬ್ಯಾಂಕು ಗಳಿಗೆ ಯಾವುದೇ ಸಮಸ್ಯೆಯಾಗದು ಎಂದು ಫಿಚ್ ರೇಟಿಂಗ್ಸ್ ತಿಳಿಸಿದೆ.

ಅದಾನಿ ಸಮೂಹದಲ್ಲಿ ಮಾಡಿರುವ ಹೂಡಿಕೆ ಬ್ಯಾಂಕುಗಳಿಗೆ ಹಾನಿಯಾಗುವ ಪ್ರಮಾಣದಷ್ಟಿಲ್ಲ ಎಂದು ಫಿಚ್ ತಿಳಿಸಿದೆ. ಅದಾನಿ ಸಮೂಹ ಸಂಕಷ್ಟಕ್ಕೆ ಸಿಲುಕುತ್ತದೆ ಎಂದು ಭಾವಿಸಿದರೂ ಸಹ, ಅವುಗಳಲ್ಲಿರುವ ಬ್ಯಾಂಕುಗಳ ಹಣ ನಿರ್ವಹಿಸಲಾಗದ ಪ್ರಮಾಣದ್ದಲ್ಲ ಎಂದು ತಿಳಿಸಲಾಗಿದೆ.

ಅದಾನಿ ಸಮೂಹಕ್ಕೆ ನೀಡಲಾದ ಸಾಲದಲ್ಲಿ ಎಸ್.ಬಿ.ಐ. ಬ್ಯಾಂಕಿನ ಪಾಲು 2016ರಲ್ಲಿ ಶೇ.55ರಷ್ಟಿತ್ತು. ಅದು 2022ರ ವೇಳೆಗೆ ಶೇ.31ಕ್ಕೆ ಇಳಿಕೆಯಾಗಿದೆ. ಅದಾನಿ ಸಮೂಹದಲ್ಲಿ ಬ್ಯಾಂಕುಗಳು ಷೇರುಗಳ ಮೂಲಕವೂ ಹೂಡಿಕೆ ಹೊಂದಿರಬಹುದು. ಆದರೆ, ಅದು ಸಾಲದಷ್ಟು ಹೆಚ್ಚಾಗಿರುವುದಿಲ್ಲ. ಎಂದೂ ತಿಳಿಸಲಾಗಿದೆ.

## ಅಭ್ಯರ್ಥಿಗಳ ಆಯ್ಕೆಗೆ 'ಕೈ' ಸ್ಕ್ರೀನಿಂಗ್ ಕಮಿಟಿ

ಬೆಂಗಳೂರು, ಫೆ. 7 - ರಾಜ್ಯ ವಿಧಾನಸಭೆ ಚುನಾವಣೆಗೆ ಪಕ್ಷದ ಅಭ್ಯರ್ಥಿಗಳ ಆಯ್ಕೆ ಅಂತಿಮ ಗೊಳಿಸಲು ಎಐಸಿಸಿ ಸ್ಕ್ರೀನಿಂಗ್ ಕಮಿಟಿ ನೇಮಿಸಿದೆ.

ಕೆಪಿಸಿಸಿ ಚುನಾವಣಾ ಸಮಿತಿ ಸಿದ್ದಪಡಿಸಿರುವ ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯನ್ನು ಸ್ಕ್ರೀನಿಂಗ್ ಕಮಿಟಿ ಇದೇ 13 ರಂದು ನಗರದಲ್ಲೇ ಸಭೆ ಸೇರಿ ಪರಾಮರ್ಶೆ ಮಾಡಲಿದೆ.

ಎಐಸಿಸಿ ಸ್ಕ್ರೀನಿಂಗ್ ಕಮಿಟಿಯ ಅಧ್ಯಕ್ಷ ಸ್ಥಾನಕ್ಕೆ ಮೋಹನ್ ಪ್ರಕಾಶ್, ಸದಸ್ಯರಾಗಿ ನೀರಜ್ ಡಂಘೀ, ಮೊಹಮದ್ ಜಾವೀದ್ ಹಾಗೂ ಸಪ್ತಗಿರಿ ಉಲ್ಕಾ ಜೊತೆಗೆ ರಾಜ್ಯದಿಂದ ಡಿ.ಕೆ. ಶಿವಕುಮಾರ್, ವಿಧಾನ ಮಂಡಲದ ಪ್ರತಿಪಕ್ಷದ ನಾಯಕರಾದ ಸಿದ್ದರಾಮಯ್ಯ ಬಿ.ಕೆ. ಹರಿಪ್ರಸಾದ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ್ ಹಾಗೂ ಹಿರಿಯ ನಾಯಕ ಡಾ. ಜಿ. ಪರಮೇಶ್ವರ್ ಜೊತೆಗೆ ರಾಜ್ಯ ಉಸ್ತುವಾರಿ ಹೊಣೆ ಹೊತ್ತ ರಣದೀಪ್‌ಸಿಂಗ್ ಸುರ್ಜೇವಾಲಾ ಇದ್ದಾರೆ.

ವಿಧಾನಸಭಾ ಚುನಾವಣೆಗೆ ಸಮಿತಿ ಅಂತಿಮ ಗೊಳಿಸುವ ಅಭ್ಯರ್ಥಿಗಳ ಪಟ್ಟಿಗೆ ಎಐಸಿಸಿ ಬಹುತೇಕ ಹಸಿರು ನಿಶಾನೆ ತೋರುತ್ತದೆ. ಕೆಪಿಸಿಸಿ ಪಟ್ಟಿಯನ್ನು ಅಂತಿಮಗೊಳಿಸಲು ಮೋಹನ್ ಪ್ರಕಾಶ್ ಅಧ್ಯಕ್ಷತೆಯಲ್ಲಿ ಎಐಸಿಸಿ ಸಮಿತಿ ನೇಮಕ ಮಾಡಿದೆ.

ಸಮಿತಿ ಇದೇ 13 ರಂದು ಸಭೆ ಸೇರಿ ವಿವಾದವಲ್ಲದ 100 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿ, ಕೇಂದ್ರ ಚುನಾವಣಾ ಸಮಿತಿಗೆ ಶಿಫಾರಸ್ಸು ಮಾಡಲಿದೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

## ವೀರಶೈವ ಮುಖಂಡರನ್ನು ಬಿಜೆಪಿ ಮೂಲೆಗುಂಪು ಮಾಡುತ್ತಿದೆ: ಹೆಚ್ಡಿಕೆ



ಬೆಂಗಳೂರು, ಫೆ. 7 - ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರನ್ನು ಮುಖ್ಯಮಂತ್ರಿ ಮಾಡುವ ಉದ್ದೇಶದಿಂದ ವೀರಶೈವ ಮುಖಂಡರನ್ನು ಬಿಜೆಪಿ ಮೂಲೆಗುಂಪು ಮಾಡುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್. ಡಿ.ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದ್ದಾರೆ.

ಕೆಲ ದಿನದ ಹಿಂದೆ ಜೋಶಿ ಅವರ ಬಗ್ಗೆ ನೀಡಿರುವ ಹೇಳಿಕೆಯನ್ನು ಹಿಂತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ. ಇವರು ಅಧಿಕಾರಕ್ಕೆ ಬಂದರೆ, ಕರ್ನಾಟಕ ಶೋಚನೀಯ ಸ್ಥಿತಿ ತಲುಪುತ್ತದೆ ಎಂಬ ಎಚ್ಚರಿಕೆ ನೀಡುತ್ತಿದ್ದೇನೆಯೇ ಹೊರತು ಯಾವುದೇ ಜಾತಿ, ಸಮಾಜಕ್ಕೆ ಅಗೌರವ ತೋರಿಲ್ಲ. ಕ್ಷಮೆ ಕೇಳುವ ಪ್ರಮೇಯವೇ ಇಲ್ಲ. ಸರ್ವ ಜನಾಂಗದ ಶಾಂತಿಯ ತೋಟ ಎಂದು ಭಾವಿಸುವ ಬ್ರಾಹ್ಮಣರ ಬಗ್ಗೆ ಮಾತನಾಡಿಲ್ಲ. ಗಾಂಧಿ ಕೊಂದ ಕುಟುಂಬ, ಶೃಂಗೇರಿಯನ್ನು ವಿಭಜನೆ ಮಾಡಿದ್ದ ಡಿಎನ್ಎ ಬಗ್ಗೆ ಅಷ್ಟೇ ಮಾತನಾಡಿದ್ದೇನೆ, ಅದಕ್ಕೆ ಈಗಲೂ ಬದ್ಧ ಎಂದು ಸಮರ್ಥಿಸಿಕೊಂಡರು.

ಈ ಡಿಎನ್ಎ ಸಂಸ್ಕೃತಿಯ ಅವರಿಗೆ ಅಧಿಕಾರ ನೀಡಬಾರದು ಎಂಬುದಷ್ಟೇ ನನ್ನ ಕಳಕಳಿ. ಮುಂದಾಗುವ ಅನಾಹುತ ತಪ್ಪಿಸಲು ಹೇಳಿಕೆ ನೀಡಿದ್ದೇನೆ ಎಂದರು.

## ಇಂದಿನಿಂದ 3ನೇ ಹಂತದ ಪಂಚರತ್ನ ಯಾತ್ರೆ

ಬೆಂಗಳೂರು, ಫೆ. 7 - ಸ್ವಂತ ಶಕ್ತಿಯ ಮೇಲೆ ರಾಜ್ಯದಲ್ಲಿ ಅಧಿಕಾರಕ್ಕೆ ಬರಬೇಕು ಎಂಬ ಗುರಿ ಹೊಂದಿರುವ ಜೆಡಿಎಸ್‌ನ 3ನೇ ಹಂತದ ಪಂಚ ರತ್ನರಥಯಾತ್ರೆ ನಾಳೆಯಿಂದ ಪ್ರಾರಂಭವಾಗಲಿದೆ.

ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ನೇತೃತ್ವದಲ್ಲಿ ನಡೆಯುವ ಈ ಯಾತ್ರೆಯು ಉತ್ತರ ಕನ್ನಡ ಜಿಲ್ಲೆಯಿಂದ ಪ್ರಾರಂಭವಾಗಿ ತಿಂಗಳ ಅಂತ್ಯದವರೆಗೂ ಒಟ್ಟು 17 ದಿನಗಳ ಕಾಲ ಜರುಗಲಿದೆ.

3ನೇ ಹಂತದಲ್ಲಿ 9 ಜಿಲ್ಲೆಯ 19 ವಿಧಾನ ಸಭಾ ಕ್ಷೇತ್ರಗಳಲ್ಲಿ ಯಾತ್ರೆ ಹಮ್ಮಿಕೊಳ್ಳಲಾಗಿದೆ.

ಮಲೆನಾಡು ಹಾಗೂ ಕಿತ್ತೂರು ಕರ್ನಾಟಕ ಭಾಗದ ಜೆಡಿಎಸ್ ಪ್ರಾಬಲ್ಯವಿರುವ ಕ್ಷೇತ್ರಗಳಲ್ಲಿ ಮಾತ್ರ ಯಾತ್ರೆ ಕೈಗೊಳ್ಳಲು ನಿರ್ಧರಿಸಲಾಗಿದೆ.

ಈ ಹಂತದಲ್ಲಿ ಹಾಸನ ಜಿಲ್ಲೆಯ ಅರಸೀಕೆರೆ ಮತ್ತು ಹೊಳೆನರಸೀಪುರ ಕ್ಷೇತ್ರಗಳಲ್ಲಿ ಫೆ.12 ರಂದು ಪಂಚರತ್ನ ರಥಯಾತ್ರೆ ಕೈಗೊಳ್ಳಲಾಗುತ್ತದೆ.

ಕುಮಟಾ ವಿಧಾನಸಭಾ (4ನೇ ಪುಟಕ್ಕೆ)

## ಮೈಲಾರ: 'ಅಂಬಲಿ ಹಳಸೀತು ಕಂಬಳಿ ಬೀಸೀತಲೇ ಪರಾಕ್'

ಹೂವಿನಹಡಗಲಿ, ಫೆ.7 - ತಾಲ್ಲೂಕಿನ ಸುಪ್ರಸಿದ್ಧ ಶ್ರೀ ಮೈಲಾರಲಿಂಗೇಶ್ವರ ಜಾತ್ರೆಯ ವಾರ್ಷಿಕ ಕಾರಣಿಕ ನುಡಿಯು 'ಅಂಬಲಿ ಹಳಸೀತು, ಕಂಬಳಿ ಬೀಸೀತಲೇ ಪರಾಕ್' ಎಂದಾಗಿದೆ.



ಮಂಗಳವಾರ ಸಂಜೆ 5.25 ಗಂಟೆಗೆ ಧರ್ಮಕರ್ತರಾದ ಶ್ರೀ ಗುರು ವೆಂಕಪ್ಪಯ್ಯ ಒಡೆಯರ್ ಅವರಿಂದ ಭಂಡಾರದ ಆಶೀರ್ವಾದ ಪಡೆದ ರಾಮಣ್ಣ ಗೊರವಪ್ಪ ಡೆಂಕನ ಮರಡಿ ಅವರು ಕಾರಣಿಕೋತ್ಸವ ಆವರಣಕ್ಕೆ ಆಗಮಿಸಿ, ಪ್ರದಕ್ಷಿಣೆ ನಡೆಸಿ ಭವಿಷ್ಯವಾಣಿ ನುಡಿದರು. ಕಾರಣಿಕ ನುಡಿಯ ನಂತರ ನೆರೆದಿದ್ದ ಭಕ್ತರು ನಾನಾ ರೀತಿಯಲ್ಲಿ ತಮ್ಮದೇ ಆದ ವಿಶ್ಲೇಷಣೆಯಲ್ಲಿ ತೊಡಗಿದ್ದರು.

ಶಾಸಕ ಪಿ.ಟಿ. ಪರಮೇಶ್ವರ ನಾಯ್ಕ, ಸಂಸದ ವೈ. ದೇವೇಂದ್ರಪ್ಪ ಸೇರಿದಂತೆ ಮಾಜಿ ಶಾಸಕ ಬಿ. ಚಂದ್ರನಾಯ್ಕ ಪಾಲ್ಗೊಂಡಿದ್ದರು. ಕಾಗಿನೆಲೆ ಕನಕ ಗುರು ಪೀಠದ ಶ್ರೀ ನಿರಂಜನಾನಂದ ಸ್ವಾಮೀಜಿ ಸೇರಿದಂತೆ ಇತರೆ ಸ್ವಾಮೀಜಿಗಳು ಭಾಗವಹಿಸಿದ್ದರು.

ಜಿಲ್ಲಾ ಉಸ್ತುವಾರಿ ಸಚಿವೆ ಶಶಿಕಲಾ ಜೊಲ್ಲೆ ಗೈರಾಗಿದ್ದುದು ಚರ್ಚೆಗೆ ಗ್ರಾಸವಾಯಿತು. ವಿಜಯನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾಧಿಕಾರಿ, ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ಸಹಾಯಕ ಆಯುಕ್ತ ಎಂ. ಎಚ್. ಪ್ರಕಾಶ್ ರಾವ್, ಕಾರ್ಯನಿರ್ವಾಹಕ ಅಧಿಕಾರಿ ಬಿ.ಎಮ್. ಕೃಷ್ಣಪ್ಪ ಮತ್ತು ಸಿಬ್ಬಂದಿ ಹಾಜರಿದ್ದರು.

ಸುಮಾರು 10 ಲಕ್ಷಕ್ಕೂ ಹೆಚ್ಚು ಭಕ್ತಾದಿಗಳು ಉತ್ಸವದಲ್ಲಿ ಭಾಗವಹಿಸಿದ್ದರು. ಕಳೆದ ಎರಡು ವರ್ಷಗಳಿಂದ ಕೊರೊನಾ ಹಿನ್ನೆಲೆಯಲ್ಲಿ ಜಾತ್ರೆಯನ್ನು ನಿರ್ಬಂಧಿಸಲಾಗಿತ್ತು.

### ವನ್ಯಜೀವಿ ತಾಣಗಳಲ್ಲಿ ಸಫಾರಿ ಬೇಡ : ಸುಪ್ರೀಂ

ನವದೆಹಲಿ, ಫೆ. 7 – ಅಭಯಾರಣ್ಯಗಳಲ್ಲಿ ಪ್ರಾಣಿ ಸಂಗ್ರಹಾಲಯಗಳ ಸ್ಥಾಪನೆ ಹಾಗೂ ಸಫಾರಿಗಳಿಗೆ ಅವಕಾಶ ನೀಡಲು ರೂಪಿಸಲಾಗಿರುವ ಮಾರ್ಗಸೂಚಿ ವಾಪಸ್ ಪಡೆಯುವಂತೆ ಸುಪ್ರೀಂ ಕೋರ್ಟ್‌ನಿಂದ ನೇಮಿಸಲಾದ ಸಮಿತಿ ಶಿಫಾರಸ್ಸು ಮಾಡಿದೆ. ಕಳೆದ ತಿಂಗಳು ಸುಪ್ರೀಂ ಕೋರ್ಟ್‌ನ ಕೇಂದ್ರೀಯ ಸಶಕ್ತ ಸಮಿತಿ ಈ ವರದಿ ಸಲ್ಲಿಸಿದೆ. ವನ್ಯಜೀವಿಗಳ ಪ್ರದೇಶವನ್ನು ಪ್ರವಾಸೋದ್ಯಮ ಚಟುವಟಿಕೆಗಳಿಗೆ ಬಳಸಿಕೊಳ್ಳಬಾರದು ಎಂದು ವರದಿಯಲ್ಲಿ ಹೇಳಲಾಗಿದೆ.

## ಜೆಇಇ-ಮೇನ್ : ಗಂಡು ಮಕ್ಕಳೇ ಸ್ಟ್ರಾಂಗು!

ನವದೆಹಲಿ, ಫೆ. 7 – ಕಳೆದ ಜನವರಿಯ ಜೆಇಇ-ಮೇನ್ ಪರೀಕ್ಷೆಯಲ್ಲಿ ಇಪ್ಪತ್ತು ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕ ಗಳಿಸಿದ್ದಾರೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ತಿಳಿಸಿದೆ. ಪೂರ್ಣ ಅಂಕ ಗಳಿಸಿದ ಈ ಎಲ್ಲರೂ ಗಂಡು ಮಕ್ಕಳೇ ಆಗಿರುವುದು ವಿಶೇಷ. ಇವರಲ್ಲಿ 14 ವಿದ್ಯಾರ್ಥಿಗಳು ಸಾಮಾನ್ಯ, ನಾಲ್ವರು ಒ.ಬಿ.ಸಿ. ತಲಾ ಒಬ್ಬರು ಸಾಮಾನ್ಯ ಇಡಬ್ಲ್ಯೂಎಸ್ ಹಾಗೂ ಎಸ್.ಸಿ. ವರ್ಗದವರಾಗಿದ್ದಾರೆ. ಈ ಪರೀಕ್ಷೆಯ ಎರಡನೇ ಆವೃತ್ತಿ ಯನ್ನು ಏಪ್ರಿಲ್ ತಿಂಗಳಲ್ಲಿ ನಡೆಸಲಾಗುವುದು. ನಂತರ ಎರಡೂ ಪರೀಕ್ಷೆಗಳ ರ್‍ಯಾಂಕ್‌ಗಳನ್ನು ಪರಿಗಣಿಸಲಾಗುವುದು.

## ಭೂಕಂಪದಲ್ಲಿ ಮೃತರ ಸಂಖ್ಯೆ 5 ಸಾವಿರಕ್ಕೆ

ಅಂಕಾರ, ಫೆ. 7 – ಟರ್ಕಿ ಹಾಗೂ ಸಿರಿಯಾಗಳಲ್ಲಿ ಸಂಭವಿಸಿದ ಭೂಕಂಪದಿಂದ ಮೃತರ ಸಂಖ್ಯೆ 5 ಸಾವಿರಕ್ಕೆ ಹೆಚ್ಚಾಗಿದೆ. ಭೂಕಂಪ ಸಂತ್ರಸ್ತರಿಗೆ ನೆರವಾ ಗಲು ವಿಶ್ವದಾದ್ಯಂತ ತಂಡಗಳನ್ನು ಕಳಿಸಲಾಗುತ್ತಿದೆ. ಟರ್ಕಿ ಒಂದರಲ್ಲೇ 6 ಸಾವಿರದಷ್ಟು ಕಟ್ಟಡಗಳು ಉರುಳಿವೆ. 200ಕ್ಕೂ ಹೆಚ್ಚು ಪಶ್ಚಾತ್ ಕಂಪನಗಳು ಹಾಗೂ ಕಡು ಚಳಿಯಿಂದ ಜನರು ತತ್ತರಿಸಿದ್ದಾರೆ.

ಹಲವಾರು ಜನರು ಅವಶೇಷಗಳಡಿ ಸಿಲುಕಿದ್ದು ಕಂಡು ಬಂದರೂ ಸಹ, ನಿರಂತರ ಕಂಪನಗಳ ಕಾರಣದಿಂದ ರಕ್ಷಣಾ ಕಾರ್ಯಾಚರಣೆಗೆ ಅಡ್ಡಿಯಾಗಿದೆ. ಹಲವೆಡೆ ನೆರವಿಗೆ ಅಗತ್ಯ ಸಿಬ್ಬಂದಿ ಹಾಗೂ ಅವಶೇಷ ತೆರವಿಗೆ ಅಗತ್ಯವಾದ ಭಾರೀ ಉಪಕರಣಗಳು ಲಭ್ಯವಿಲ್ಲ. ಸಿರಿಯಾ ಕಳೆದ 12 ವರ್ಷಗಳಿಂದ ಅಂತರ್ಯುದ್ಧದಲ್ಲಿ ಸಿಲುಕಿದೆ. ಈ ನಡುವೆಯೇ ಸಂಭವಿಸಿರುವ ಭೀಕರ ಭೂಕಂಪ ಜನರ ಸಂಕಷ್ಟ ಹೆಚ್ಚಿಸಿದೆ. ಸಿರಿಯಾದ ಭೂಕಂಪ ಪೀಡಿತ ಪ್ರದೇಶವು ಸರ್ಕಾರ ಹಾಗೂ ವಿರೋಧಿಗಳ ಹಿಡಿತದಲ್ಲಿರುವ ಪ್ರದೇಶದ ಮಧ್ಯದಲ್ಲಿದೆ.

## ಮ್ಯಾಸನಾಯಕ ಸಮುದಾಯ ಎಸ್ಟಿಗೆ ಸೇರಿಸಿ

### ಜಗಳೂರು: ಗುಗ್ಗರಿ ಹಬ್ಬದ ವೇದಿಕೆಯಲ್ಲಿ ಮಾಜಿ ಶಾಸಕ ಹೆಚ್.ಪಿ.ರಾಜೇಶ್ ಒತ್ತಾಯ



ಜಗಳೂರು, ಜ.7- ಮ್ಯಾಸ ನಾಯಕ ಬುಡಕಟ್ಟು ಸಮುದಾಯವನ್ನು ಒಬಿಸಿ ಗೆ ಸೇರ್ಪಡೆ ಮಾಡಲಾಗಿದ್ದು, ಸರ್ಕಾರ ತಕ್ಷಣ ಈ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ತೀವ್ರಗೊಳ್ಳಲಿದೆ ಎಂದು ಮಾಜಿ ಶಾಸಕ ಎಚ್.ಪಿ. ರಾಜೇಶ್ ಹೇಳಿದರು.

ಸೋಮವಾರ ರಾತ್ರಿ ಪಟ್ಟಣದ ಪಾಪಿ ದೇವಸ್ಥಾನದ ಆವರಣದಲ್ಲಿ ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ ಮ್ಯಾಸ ಬುಡಕಟ್ಟು ಜನಾಂಗದ ಆರಾಧ್ಯ ದೈವ, ಜಗಳೂರು ಪಾಪ ನಾಯಕ ದೇವಸ್ಥಾನದ ಕಳಸಾರೋಹಣ ಹಾಗೂ ಗುಗ್ಗರಿ ಹಬ್ಬದ ವೇದಿಕೆಯ ಕಾರ್ಯಕ್ರಮವನ್ನು ದ್ದೇಶಿಸಿ ಅವರು ಮಾತನಾಡಿದರು.

ನಾವು ಮೂರ್ತಿ ಆರಾಧಕರಲ್ಲ. ಕಾಡಿನಲ್ಲಿರುವ ಗಿಡ, ಮರ, ಕಲ್ಲುಗಳನ್ನು ಪೂಜೆ ಮಾಡುವಂತವರು. ಇತ್ತೀಚೆಗೆ ನಾಗರಿಕರ ಜೊತೆ ಬಂದು ಜೀವನ ನಡೆಸುತ್ತಿದ್ದೇವೆ. ಮ್ಯಾಸ ನಾಯಕ ಬುಡಕಟ್ಟು ಸಮುದಾಯಕ್ಕೆ 12 ಕಟ್ಟೆ ಮನೆಗಳಿದ್ದು, ದೇವರ ಎತ್ತುಗಳು ಇವೆ. ಈ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬರಬೇಕಾಗಿದೆ ಎಂದು ಹೇಳಿದರು.

ಮ್ಯಾಸನಾಯಕರ ಆರಾಧ್ಯ ದೈವ ಪಾಪ ಲಿಂಗೇಶ್ವರರಾಗಿದ್ದಾರೆ. ಜಾತ್ರೆಯ ಸಮಯದಲ್ಲಿ ದೇವರ ಎತ್ತುಗಳನ್ನು ಕರೆಸಿ ಗಂಗೆ ಪೂಜೆ ಮಾಡಿಕೊಂಡು ಬರುವ ವಾಡಿಕೆ ಇದೆ. ಅದರಂತೆ ಎಲ್ಲಾ ಆಚರಣೆಗಳನ್ನು ಸಮರ್ಪಕವಾಗಿ ಮಾಡಿಕೊಂಡು ಬರಲಾಗುತ್ತಿದೆ ಎಂದರು.

ಈ ಸಮುದಾಯವನ್ನು ಒಬಿಸಿಗೆ ಸೇರಿಸಿ ಎಂದು ನಿಮಗೆ ಯಾರು ಹೇಳಿಲ್ಲ. ಆದರೆ ನೀವೇ ಸೇರಿಸಿದ್ದೀರಿ. ಮ್ಯಾಸ ನಾಯಕ ಬುಡಕಟ್ಟು ಸಮುದಾಯದವರು ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ ಜಿಲ್ಲೆಯಲ್ಲಿ ದೊಡ್ಡ ಸಮುದಾಯವಿದೆ. ಮೀಸಲಾತಿ ವಿಚಾರವಾಗಿ ಈಗಾಗಲೇ ಹೋರಾಟ ಸಮಿತಿಯವರು ಸರ್ಕಾರಕ್ಕೆ ಒತ್ತಾಯ ಮಾಡಿದ್ದಾರೆ. ಸರ್ಕಾರ ಕೂಡಲೇ ಒಬಿಸಿ ಪಟ್ಟಿಯಿಂದ ತೆಗೆದು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ಮಾಡಲಾಗುವುದು ಎಂದು ಮಾಜಿ ಶಾಸಕರು ಎಚ್ಚರಿಸಿದರು.

ಕಾಂಗ್ರೆಸ್ ಎಸ್ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ ಮಾತನಾಡಿ, ಭಕ್ತರು ಬೃಹತ್ ದೇವಾಲಯ ನಿರ್ಮಿಸಿ ಕಳಸಾರೋಹಣ ಮಾಡಿದ್ದು, ಕಾರ್ಯಕ್ರಮಕ್ಕೆ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರನ್ನು ಕರೆಸಿ ಯಶಸ್ವಿಗೊಳಿಸಿದ್ದಾರೆ ಎಂದರು. ಪಟ್ಟಣ ಪಂಚಾಯಿತಿ ಸದಸ್ಯ ಆರ್.ತಿಪ್ಪೇಸ್ವಾಮಿ ಮಾತನಾಡಿ, ಇಲ್ಲಿನ ದೇವರು ನಾಯಕ ಸಮಾಜಕ್ಕೆ ಒಂದೇ ಸಿಮಿತವಾಗಿಲ್ಲ. ಎಲ್ಲಾ ಸಮುದಾಯದವರ ಆರಾಧ್ಯ ದೈವ. ಇವರನ್ನು ಜಗಳೂರಜ್ಜ ಎಂದು ಕರೆಯುತ್ತಾರೆ ಎಂದು ಹೇಳಿದರು.

ದೇವಸ್ಥಾನದ ಕಳಸಾರೋಹಣ ಹಾಗೂ ಗುಗ್ಗರಿ ಹಬ್ಬದ ವೇದಿಕೆಯ ಕಾರ್ಯಕ್ರಮವನ್ನು ಶಾಸಕ ಎಸ್.ವಿ. ರಾಮಚಂದ್ರ ಉದ್ಘಾಟಿಸಿ ಮಾತನಾಡಿದರು.

ಪಟ್ಟಣ ಪಂಚಾಯಿತಿ ಅಧ್ಯಕ್ಷೆ ವಿಶಾಲಾಕ್ಷಿ ಓಬಳೇಶ್, ಉಪಾಧ್ಯಕ್ಷೆ ನಿರ್ಮಲ ಕುಮಾರಿ ಹನುಮಂತಪ್ಪ, ಪ.ಪಂ. ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ಜಿ.ಪಂ ಮಾಜಿ ಅಧ್ಯಕ್ಷೆ ಸವಿತಾ ಕಲ್ಲೇಶ್ , ಸದಸ್ಯರಾದ ಮಂಜಣ್ಣ, ದೇವರಾಜ್, ಲೋಕಮ್ಮ, ತಿಪ್ಪೇಸ್ವಾಮಿ, ಪಾಪಲಿಂಗ ಸೇರಿದಂತೆ ಮುಖಂಡರಾದ ಕೃಷ್ಣಪ್ಪ, ಶ್ರೀನಿವಾಸ, ಮೆಳ್ಳೇಕಟ್ಟೆ ತಿಮ್ಮಣ್ಣ, ಲೋಕಣ್ಣ, ಸತೀಶ್, ನಾಗರಾಜ್, ಶಿವಣ್ಣ, ದಾನೆಗೌಡ್ರು ಮತ್ತಿತರರು ಹಾಜರಿದ್ದರು.

## ಗೌರಿ ಜಡ್ಜ್ ಆಗಲು ಸುಪ್ರೀಂ ತಡೆಯಿಲ್ಲ

ಚೆನ್ನೈ, ಫೆ. 7 – ಮದ್ರಾಸ್ ಹೈಕೋರ್ಟ್ ಹೆಚ್ಚುವರಿ ನ್ಯಾಯಮೂರ್ತಿಯಾಗಿ ವಿಕ್ಟೋರಿಯ ಗೌರಿ ಅಧಿಕಾರ ವಹಿಸಿಕೊಂಡಿದ್ದಾರೆ.


ಗೌರಿ ಅವರು ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಭಾಷಣ ಮಾಡಿದ್ದಾರೆ, ಅವರನ್ನು ನ್ಯಾಯಮೂರ್ತಿಯಾಗಿ ನೇಮಿಸಬಾರದು ಎಂದು ದಾಖಲಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ. ಗೌರಿ ಅವರನ್ನು (2ನೇ ಪುಟಕ್ಕೆ)

## ಎನ್.ಎಂ.ಸಿ. ಹುದ್ದೆಗೆ ಪ್ರಹ್ಲಾದ್ ಜೋಶಿ ಕಚೇರಿಗೆ ಲಂಚ: ಭೋಜೇಗೌಡ ಆರೋಪ

ಬೆಂಗಳೂರು, ಫೆ. 7 - ರಾಷ್ಟ್ರೀಯ ವೈದ್ಯಕೀಯ ಮಂಡಳಿ (ಎನ್.ಎಂ.ಸಿ.) ಸದಸ್ಯರನ್ನಾಗಿ ನೇಮಿಸಲು ಶಿವಮೊಗ್ಗದ ವೈದ್ಯರೊಬ್ಬರಿಂದ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ ಜೋಶಿ ಕಚೇರಿಯಲ್ಲಿ ಲಂಚ ಪಡೆಯಲಾಗಿದೆ ಎಂದು ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಎಸ್.ಎಲ್. ಭೋಜೇಗೌಡ ಆರೋಪಿಸಿದರು.

ಪಕ್ಷದ ಕಚೇರಿ ಜೆ.ಪಿ. ಭವನದಲ್ಲಿ ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ಜೊತೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕ ಡಾ. ಹರೀಶ್ ಅಯ್ಯಣ್ಣ ಎಂಬುವವರಿಂದ ಲಂಚ ಪಾವತಿ ಆಗಿದೆ ಎಂದರು. ಈ ಸಂದರ್ಭದಲ್ಲಿ ಅವರು ಕೆಲ ದಾಖಲೆಗಳನ್ನು ಪ್ರದರ್ಶಿಸಿದರು. ಜೋಶಿ ಅವರ ಕಚೇರಿಯಲ್ಲಿ ಕಾರ್ಯನಿರ್ವಹಿ (2ನೇ ಪುಟಕ್ಕೆ)

## ಹರಿಹರಕ್ಕೆ ನಾಳೆ ಸಿಎಂ ಬೊಮ್ಮಾಯಿ



ಹರಿಹರ, ಫೆ.7- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಾಡಿದ್ದು ದಿನಾಂಕ 9ರ ಗುರುವಾರ ಹರಿಹರ ತಾಲ್ಲೂಕು ರಾಜನಹಳ್ಳಿ ಗ್ರಾಮಕ್ಕೆ ಆಗಮಿಸಿ, ಶ್ರೀ ವಾಲ್ಮೀಕಿ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಲಿದ್ದಾರೆ. ಅಂದು ಮಧ್ಯಾಹ್ನ 12.30 ಗಂಟೆಗೆ ಬೆಂಗಳೂರು ಹೆಲಿಪ್ಯಾಡ್ ನಿಂದ ಪ್ರಯಾಣ ಬೆಳೆಸಿ, ಮಧ್ಯಾಹ್ನ 1.50 ಕ್ಕೆ ರಾಜನಹಳ್ಳಿ ಶ್ರೀ ಮಹರ್ಷಿ ವಾಲ್ಮೀಕಿ ಗುರುಪೀಠದ ಹೆಲಿಪ್ಯಾಡ್‌ಗೆ ಆಗಮಿಸುವರು. ಮಹರ್ಷಿ ವಾಲ್ಮೀಕಿ ಜಾತ್ರಾ ಮಹೋತ್ಸವದ ಉದ್ಘಾಟನೆಯಲ್ಲಿ ಭಾಗವಹಿಸುವರು.


LADIES PG BUILDING
FOR RENT
ಸುಸಜ್ಜಿತವಾದ ಮಹಿಳಾ ವಸತಿ ನಿಲಯ ಬಾಡಿಗೆಗಿದೆ.
S.N. Layout Davangere.
Mob.: 95351 14063
96203 71544, 97428 35642



ಹುಟ್ಟುಹಬ್ಬದ ಶುಭಾಶಯಗಳು



ಇಂದು ತಮ್ಮ ಜನ್ಮದಿನವನ್ನು ಆಚರಿಸಿಕೊಳ್ಳುತ್ತಿರುವ
ತರಕಾರಿ ದಲ್ಲಾಲಿ ಮಂಡಿಯ ವರ್ತಕರಾದ
ಶ್ರೀಯುತ ಯು.ಎಲ್. ಪರಮೇಶ್ವರಪ್ಪನವರಿಗೆ
ಹಾರ್ದಿಕ ಶುಭಾಶಯಗಳು. ದೇವರು ಇವರಿಗೆ ಆರೋಗ್ಯ,
ಆಯುಷ್ಯ ಕರುಣಿಸಲೆಂದು ಹಾರೈಸುವವರು...

ಆರ್.ಎಂ. ಮಂಜುನಾಥ
ಕಲ್ಬಂಡೆ ಮಂಜುನಾಥ
ಅನಿಲ್ ಚಿಕ್ಕನಹಳ್ಳಿ
ಹಾಗೂ ಕುಚುಕು ಫ್ರೆಂಡ್ಸ್ ಗ್ರೂಪ್, ದಾವಣಗೆರೆ.



# 5ನೇ ವರ್ಷದ ಐತಿಹಾಸಿಕ ವಾಲ್ಮೀಕಿ ಜಾತ್ರೆಗೆ ಸಜ್ಜಾದ ರಾಜನಹಳ್ಳಿ ಮಠ

ಜಗಳಿ ಪ್ರಕಾಶ್







## ಈ ವರ್ಷದ ಜಾತ್ರೆಗೆ ನೂತನ ರಥ ಲೋಕಾರ್ಪಣೆಯ ಮೆರಗು

ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಇಂದು ಮತ್ತು ನಾಳೆ 5ನೇ ವರ್ಷದ ಐತಿಹಾಸಿಕ ವಾಲ್ಮೀಕಿ ಜಾತ್ರಾ ಮಹೋತ್ಸವ ಜರುಗಲಿದ್ದು, ಅದಕ್ಕಾಗಿ ಗುರುಪೀಠ ಸಕಲ ರೀತಿಯಲ್ಲಿ ಸಜ್ಜಾಗಿದೆ.

ಭಕ್ತರನ್ನು, ಅತಿಥಿಗಳನ್ನು ಸ್ವಾಗತಿಸುವ ಫ್ಲೆಕ್ಸ್ ಕಟೌಟ್‌ಗಳನ್ನು ಎಲ್ಲೆಡೆ ರಾರಾಜಿಸುತ್ತಿದ್ದು, ಹಸಿರು-ತೋರಣಗಳಿಂದ, ಹೂವಿನ ಅಲಂಕಾರದಿಂದ ಮಠ ನವ ವಧುವಿನಂತೆ ಸಿಂಗಾರಗೊಂಡಿದೆ. ರಾತ್ರಿ ವೇಳೆಯಲ್ಲಿ ಬಣ್ಣ ಬಣ್ಣದ ವಿದ್ಯುತ್ ದೀಪಗಳ ಅಲಂಕಾರ ಮಠದ ವೈಭವವನ್ನು ಹೆಚ್ಚಿಸಿದೆ.

ದಾವಣಗೆರೆಯ ತರುಣ್ ಈವೆಂಟ್ ಮ್ಯಾನೇಜ್‌ಮೆಂಟ್‌ನ ಹುಲ್ಲುಮನಿ ಪ್ರಸಾದ್ ಅವರು, ಜಾತ್ರೆಯ ಶಾಮಿಯಾನ ಹಾಗೂ ಅಲಂಕಾರವನ್ನು ವ್ಯವಸ್ಥಿತವಾಗಿ ಮಾಡಿದ್ದು, ವೇದಿಕೆ ಹಾಗೂ ಮಹಾಮಂಟಪ ಎಲ್ಲರನ್ನೂ ಕೈಬೀಸಿ ಕರೆಯುವಂತಿದೆ.

ದಾಸೋಹ ಮಂಟಪವೂ ವಿಶಾಲವಾಗಿದ್ದು, 100 ಊಟದ ಕೌಂಟರ್‌ಗಳನ್ನು ತೆರೆಯಲಾಗಿದೆ. ಕೊಮಾರನಹಳ್ಳಿಯ ವಾಸುದೇವಾಚಾರ್ ನೇತೃತ್ವದಲ್ಲಿ 600 ಜನ ಅಡುಗೆ ತಯಾರಕರ ತಂಡವು ಎರಡು ದಿನಗಳ ಕಾಲ ಬೆಳಗಿನ ತಿಂಡಿ, ನಂತರ ಇಡೀ ದಿನ ಗೋಧಿ ಹುಗ್ಗಿ, ಪಲ್ಯ, ರೊಟ್ಟಿ, ಅನ್ನ-ಸಾರು ನೀಡಲಿದ್ದಾರೆ.

ಜಾತ್ರೆಗಾಗಿ ಕೈಗೊಂಡಿದ್ದ ಎಲ್ಲಾ ಸಿದ್ಧತೆಗಳಿಗೆ ಮಂಗಳವಾರ ಸಂಜೆ ಅಂತಿಮ ರೂಪ ಕೊಡಲಾಯಿತು. ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಖುದ್ದು ಹಾಜರಿದ್ದು ಜಾತ್ರೆಯ ಸಿದ್ಧತೆಗಳನ್ನು ಪೂರ್ಣಗೊಳಿಸಿದರು.

ಭಾರತೀಯ ಪರಂಪರೆಯಲ್ಲಿ ಹಲವು ಸಮುದಾಯಗಳು ಧಾರ್ಮಿಕ ಮಠ-ಪೀಠಗಳಿಂದ ಸಾಮಾಜಿಕ ಜಾಗೃತಿಯೊಂದಿಗೆ ಶೈಕ್ಷಣಿಕ ಕೊಡುಗೆ ನೀಡುತ್ತಾ ಬಂದಿವೆ. ಈ ನಿಟ್ಟಿನಲ್ಲಿ ವಾಲ್ಮೀಕಿ ನಾಯಕ ಜನಾಂಗವು ಶ್ರೀ ಮಹರ್ಷಿ ವಾಲ್ಮೀಕಿ ಅವರ ಹೆಸರಿನಲ್ಲಿ ಸಮಾಜದ ಹಿರಿಯರೆಲ್ಲರೂ ಸೇರಿ ಫೆಬ್ರವರಿ 9, 1998 ರಲ್ಲಿ ರಾಜನಹಳ್ಳಿ ಗ್ರಾಮದಲ್ಲಿ ವಾಲ್ಮೀಕಿ ಗುರುಪೀಠ ಸ್ಥಾಪನೆಯೊಂದಿಗೆ, ಮಠದ ಪ್ರಥಮ ಜಗದ್ಗುರುಗಳಾಗಿ ಶ್ರೀ ಪುಣ್ಯಾನಂದ ಪುರಿ ಸ್ವಾಮೀಜಿ ಅವರಿಗೆ ಪಟ್ಟಾಭಿಷೇಕ ಮಾಡಲಾಯಿತು.

ಶ್ರೀಗಳು ವಾಲ್ಮೀಕಿ ರಾಮಾಯಣದ ಸಂದೇಶವನ್ನು ಸಮಾಜದ ಜನರಿಗೆ ತಿಳಿಸುತ್ತಾ, ಸಮಾಜವನ್ನು ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯವಾಗಿ ಬೆಳೆಸಲು ಹಗಲಿರುಳು ಶ್ರಮಿಸಿದರು.

ಸಮಾಜದ ಜಾಗೃತಿಗಾಗಿ ಮತ್ತು ಅಭಿವೃದ್ಧಿಗಾಗಿ ಅವರು ನಡೆಸಿದ ಹೋರಾಟ ಇಂದಿಗೂ ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿದೆ. ಪುಣ್ಯಾನಂದಪುರಿ ಶ್ರೀಗಳು ರೈಲ್ವೆ ಅಪಘಾತದಲ್ಲಿ ಅಕಾಲಿಕವಾಗಿ ಲಿಂಗೈಕ್ಯರಾದ ನಂತರ ಗುರುಪೀಠದ 2ನೇ ಪೀಠಾಧಿಪತಿಯಾಗಿ ಬಂದಂತಹ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಕಳೆದ 15 ವರ್ಷಗಳಿಂದ ನಾಡಿನ ಉದ್ದಗಲಕ್ಕೂ ನಿರಂತರವಾಗಿ ಸಂಚರಿಸಿ, ವಾಲ್ಮೀಕಿ ನಾಯಕ ಜನಾಂಗವು ಹಿಂದುಳಿಯಲು ಕಾರಣಗಳೇನೆಂಬುದನ್ನು ಅರಿತು, ಇತರೆ ಸಮಾಜ ಗಳಂತೆ ಮುಖ್ಯ ವಾಹಿನಿಗೆ ತರಲು ಅಗತ್ಯವಾದ ರಚನಾತ್ಮಕ ಕಾರ್ಯಕ್ರಮ ಹಾಗೂ ಹೋರಾಟ ಗಳನ್ನು ಹಮ್ಮಿಕೊಂಡು ಸಮಾಜವನ್ನು ಸಂಘಟಿ ಸುತ್ತಾ ಬಂದಿದ್ದಾರೆ. ಜನ ಜಾಗೃತಿಗಾಗಿ 'ಜಾತ್ರೆ' ಎಂಬ ಪರಿಕಲ್ಪನೆಯೊಂದಿಗೆ ಕಳೆದ ನಾಲ್ಕು ವರ್ಷ ಗಳಿಂದ ಗುರುಪೀಠದಲ್ಲಿ ವಾಲ್ಮೀಕಿ ಜಾತ್ರೆಯನ್ನು ನಡೆಸುತ್ತಾ, ಸಮಾಜದ ಜನರಲ್ಲಿ ವೈಚಾರಿಕತೆ, ಸಾಂಸ್ಕೃತಿಕ ಪರಂಪರೆಯನ್ನು ಹಾಗೂ ಭಾವನಾತ್ಮಕ ಸಂಬಂಧವನ್ನು ಬೆಸೆಯುವ ಕೆಲಸ ಮಾಡುತ್ತಿದ್ದಾರೆ.

ಸಚಿವ ಆನಂದ್ ಸಿಂಗ್ ಹಾಗೂ ಮತ್ತಿತರರ ನೆರವಿನಿಂದ ಸುಮಾರು ಎರಡು ಕೋಟಿ ರೂ. ವೆಚ್ಚದಲ್ಲಿ ಸಿದ್ಧಗೊಂಡಿರುವ ನೂತನ ರಥ ಈ ಜಾತ್ರೆಯಲ್ಲಿ ಲೋಕಾರ್ಪಣೆಗೊಳ್ಳಲಿದೆ. ರಥದಲ್ಲಿ ರಾಮಾಯಣದ ಎಲ್ಲಾ ಪ್ರಸಂಗಗಳನ್ನು ಕಲಾತ್ಮಕವಾಗಿ ಕೆತ್ತನೆ ಮಾಡಲಾಗಿದ್ದು, ಎಲ್ಲರ ಗಮನ ಸೆಳೆಯುವಂತಿದೆ. ಎಲ್ಲಾ ವರ್ಗದ ನಿರುದ್ಯೋಗಿ ಯುವಕರಿಗೆ ಅನುಕೂಲವಾಗಲೆಂಬ ದೃಷ್ಟಿಯಿಂದ ಇದೇ ಮೊದಲ ಬಾರಿಗೆ ಜಾತ್ರೆಯಲ್ಲಿ ಸರ್ಕಾರದ ಸಹಯೋಗದಲ್ಲಿ ಉದ್ಯೋಗ ಮೇಳವನ್ನು ಏರ್ಪಡಿಸಲಾಗಿದೆ. ಜಾತ್ರೆಗೆ ಸುಮಾರು 4 ರಿಂದ 5 ಲಕ್ಷ ಜನರು ಆಗಮಿಸುವ ನಿರೀಕ್ಷೆಯಿದ್ದು, ಮಠದ ಆವರಣದಲ್ಲಿ ಸ್ವಚ್ಛತೆಗೆ ಒತ್ತು ನೀಡಿ, ಜನರಿಗೆ ಅಗತ್ಯ ಸೌಲಭ್ಯ ಕಲ್ಪಿಸಲಾಗಿದೆ. ವಿವಿಧ ಇಲಾಖೆಗಳಲ್ಲಿ ಜನರಿಗೆ ಸಿಗುವ ಸೌಲಭ್ಯಗಳನ್ನು ತಿಳಿಸುವುದಕ್ಕಾಗಿ ಜಾತ್ರೆಯಲ್ಲಿ 30ಕ್ಕೂ ಹೆಚ್ಚು ಸ್ಟಾಲ್‌ಗಳನ್ನು ಹಾಕಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯ, ಹೆಚ್.ಡಿ. ಕುಮಾರಸ್ವಾಮಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸತೀಶ್ ಜಾರಕಿಹೊಳಿ, ನಟ ಕಿಚ್ಚ ಸುದೀಪ್ ಅವರು ಹೆಲಿಕಾಪ್ಟರ್‌ನಲ್ಲಿ ಆಗಮಿಸುವ ಸಾಧ್ಯತೆ ಇದ್ದು, ಅದಕ್ಕಾಗಿ 3 ಹೆಲಿಪ್ಯಾಡ್‌ಗಳನ್ನು ನಿರ್ಮಿಸಲಾಗಿದೆ.

**ಬಿಗಿ ಭದ್ರತೆ :** ಈ ಜಾತ್ರೆಗೆ 1000 ಕ್ಕೂ ಹೆಚ್ಚು ಪೊಲೀಸರ ಭದ್ರತೆ ನೀಡಲಾಗಿದೆ. ಐಜಿಪಿ, ಎಸ್ಪಿ, ಎಎಸ್ಪಿ ಅವರ ಮಾರ್ಗದರ್ಶನದಲ್ಲಿ 4 ಡಿವೈಎಸ್ಪಿ, 12 ಸಿಪಿಐ, 36 ಪಿಎಸ್‌ಐ, 50 ಎಎಸ್‌ಐ ಮತ್ತು 325 ಪೊಲೀಸ್ ಸಿಬ್ಬಂದಿ, 35 ಮಹಿಳಾ ಸಿಬ್ಬಂದಿ, 25 ಟ್ರಾಫಿಕ್ ಪೊಲೀಸ್, 2 ಕೆಎಸ್‌ಆರ್‌ಪಿ ತುಕಡಿ, 4 ಡಿಎಆರ್‌ಗಳನ್ನು ಭದ್ರತೆಗೆ ನೇಮಿಸಲಾಗಿದೆ ಎಂದು ಜಿಲ್ಲಾ ಹಿರಿಯ ಪೊಲೀಸ್ ಸಹಾಯಕ ಅಧೀಕ್ಷಕಿ ಕನ್ನಿಕಾ ಸಿಕ್ರಿವಾಲ್, ಹರಿಹರ ಸಿಪಿಐ ಗೌಡಪ್ಪ ಗೌಡ್ರು, ಹರಿಹರ ಗ್ರಾಮಾಂತರ ಪಿಎಸ್‌ಐ ರಾಜು ಮಾಹಿತಿ ನೀಡಿದರು.

